ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 11
ಸೆಪ್ಟೆಂಬರ್ 2023

SHRIDEVI ANTARANGA
Monthly Magazine






ಪ್ರಧಾನ ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

**2022ರಲ್ಲಿ ಭಾರತದ ಆರೋಗ್ಯವಲಯ 372 ಬಿಲಿಯನ್ ಅಮೆರಿಕನ್ ಡಾಲರ್‌ರಷ್ಟು ಬಂಡವಾಳವನ್ನು ಹೊಂದಿದೆ. ಆರೋಗ್ಯವಲಯದಲ್ಲಿ 4.7 ದಶಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ.**

## ರಾಜ್ಯದ ಆರ್ಥಿಕಕ್ಷೇತ್ರಕ್ಕೆ ಶಕ್ತಿ ನೀಡುವ ವೈದ್ಯಕೀಯ ಪ್ರವಾಸೋದ್ಯಮಕ್ಕೆ ಬೇಕು ಕಾಯಕಲ್ಪ



18 ಮತ್ತು 19ನೆಯ ಶತಮಾನಗಳಲ್ಲಿ ದೇಶದ ಆರ್ಥಿಕರಂಗದ ಬಲಿಷ್ಠತೆಯನ್ನು ಅಳೆಯಬೇಕಾದರೆ ಆ ರಾಷ್ಟ್ರ ಹೊಂದಿದ್ದ ಭೂ ವಿಸ್ತೀರ್ಣಕ್ಕೆ ಪ್ರಾಮುಖ್ಯತೆ ಕೊಡಲಾಗಿತ್ತು. ಭಾರತಕ್ಕೆ ಬ್ರಿಟಿಷರು ಬರುವುದಕ್ಕೆ ಮುಂಚೆ ಈ ದೇಶ ಜವಳಿ ಉದ್ಯಮದಲ್ಲಿ ಅತ್ಯಂತ ಖ್ಯಾತಿ ಪಡೆದಿತ್ತು. ಮಲ್ ಬಟ್ಟೆಗಳನ್ನು ಸಣ್ಣ ಸಣ್ಣ ಪ್ಯಾಕೆಟ್‌ಗಳಲ್ಲಿ ವಿದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು ಎಂದು ವಿದೇಶಿ ಪ್ರವಾಸಿಗರು ಬರೆಯುತ್ತಾರೆ. ಫ್ರಾನ್ಸಿಸ್ ಬುಕಾನನ್ ಹ್ಯಾಮಿಲ್ಟನ್ ಮೈಸೂರು ಮತ್ತು ಮಲಬಾರ್ ಪ್ರದೇಶಗಳಿಗೆ ಭೇಟಿ ಕೊಟ್ಟು ಅಲ್ಲಿನ ವಾಣಿಜ್ಯ ಚಟುವಟಿಕೆಗಳನ್ನು ದಾಖಲು ಮಾಡಿದ್ದಾನೆ. ಆಗ ಭಾರತದ ಆರ್ಥಿಕ ಶಕ್ತಿ ಸಣ್ಣ ಉದ್ಯಮದ ಮೇಲೆ ಅವಲಂಬಿತವಾಗಿತ್ತು. ಅನೇಕ ಗೃಹಕೈಗಾರಿಕೆಗಳು ದೇಶದ ಬೆನ್ನೆಲುಬಾಗಿತ್ತು. ಚಿನ್ನ ಸೇರಿದಂತೆ ಅಮೂಲ್ಯ ಖನಿಜಗಳಿಗೆ ಮಧ್ಯಕಾಲೀನ ಭಾರತ ಹೆಸರಾಗಿತ್ತು. ಅಂದು ದಕ್ಷಿಣ ಭಾರತದಲ್ಲಿ ನಡೆಯುತ್ತಿದ್ದ ಅನೇಕ ಸಂತೆಗಳನ್ನು ವಿದೇಶಿ ಪ್ರವಾಸಿಗರು ನೋಡಿದ್ದರು. ಅಲ್ಲಿನ ವ್ಯಾಪಾರ ವಹಿವಾಟಿನ ಬಗ್ಗೆ ಆಸಕ್ತಿಪೂರ್ಣವಾದ ಮಾಹಿತಿ ಕೊಡುತ್ತಾರೆ. ಬ್ರಿಟಿಷರು ಜವಳಿ ಸೇರಿದಂತೆ ಅನೇಕ ಗೃಹಕೈಗಾರಿಕೆಗಳಿಗೆ ಪೆಟ್ಟು ಕೊಟ್ಟರು. ಗೃಹ ಕೈಗಾರಿಕೆಗಳ ಅವನತಿಯ ನಂತರ ಭಾರತ ಕೃಷಿ ಪ್ರಧಾನ ರಾಷ್ಟ್ರವಾಯಿತು.

ಭಾರತ ಸ್ವಾತಂತ್ರ್ಯಾನಂತರ ತನ್ನ ಆರ್ಥಿಕಕ್ಷೇತ್ರದ ಮಾನದಂಡಗಳನ್ನು ಬದಲಿಸಿತು. ಕೈಗಾರಿಕೆ ಮತ್ತು ಖನಿಜ ಸಂಪತ್ತು ದೇಶದ ಸಂಪನ್ಮೂಲಗಳನ್ನು ನಿರ್ಧರಿಸುವ ಕ್ಷೇತ್ರವಾಯಿತು. ಜೊತೆ ಬೃಹತ್ ಅಣೆಕಟ್ಟುಗಳ ನಿರ್ಮಾಣಕ್ಕೆ ಆದ್ಯತೆ ದೊರೆಯಿತು. ಕೃಷಿ ಕ್ಷೇತ್ರದ ವಿಸ್ತರಣೆ ನಡೆಯಿತು.

1992ರಲ್ಲಿ 'ಜಾಗತೀಕರಣ' 'ಉದಾರೀಕರಣ' ಮತ್ತು 'ವಿಶ್ವವ್ಯಾಪಾರೀಕರಣ' ಮೊದಲಾದ ಹೊಸ ಆರ್ಥಿಕ ಸಿದ್ಧಾಂತಗಳು ಚಾಲ್ತಿಗೆ ಬಂದವು. ಭಾರತದ ಆರ್ಥಿಕ ಕ್ಷೇತ್ರ ಹಿಂದೆಂದೂ ಕಾಣದ ವಿಶಾಲತೆಯನ್ನು ಪಡೆದುಕೊಂಡಿತು.

ಎಲ್ಲ ಕ್ಷೇತ್ರಗಳಿಗೂ ವಿದೇಶಿ ಬಂಡವಾಳ ಹರಿದು ಬಂತು. 'ಸೇವಾಲಯ' ಮತ್ತು ಶಿಕ್ಷಣಕ್ಷೇತ್ರ'ಗಳಿಗೆ ಹೆಚ್ಚಿನ ಆದ್ಯತೆ ದೊರೆಯಿತು. ವೈದ್ಯಕೀಯ ಕ್ಷೇತ್ರ ಸಹ ಇದರ ಲಾಭ ಪಡೆಯಿತು. 2022ರಲ್ಲಿ ಭಾರತದ ಆರೋಗ್ಯವಲಯ 372 ಬಿಲಿಯನ್ ಅಮೆರಿಕನ್ ಡಾಲರ್‌ರಷ್ಟು ಬಂಡವಾಳವನ್ನು ಹೊಂದಿದೆ. ಆರೋಗ್ಯವಲಯದಲ್ಲಿ 4.7 ದಶಲಕ್ಷ ಜನರು ಕೆಲಸ ಮಾಡುತ್ತಿದ್ದಾರೆ.ನವೆಂಬರ್ 2022ಕ್ಕೆ ಭಾರತದಲ್ಲಿ 1.3 ದಶಲಕ್ಷ ವೈದ್ಯರು ಕೆಲಸ ಮಾಡುತ್ತಿದ್ದಾರೆ. 2010ರಲ್ಲಿ 0.83 ದಶಲಕ್ಷ ವೈದ್ಯರು ಮಾತ್ರವಿದ್ದರು. ಜಿ.ಡಿ.ಪಿಯ ಶೇಕಡ 21ರಷ್ಟು ಮೊತ್ತವನ್ನು ಜನ ತಮ್ಮ ಆರೋಗ್ಯಕ್ಕಾಗಿ ವೆಚ್ಚ ಮಾಡುವಷ್ಟು ಆರ್ಥಿಕ ಚೈತನ್ಯ ಪಡೆದಿದ್ದಾರೆ. ಇಂತಹ ಅದ್ಭುತ ಬೆಳವಣಿಗೆಯ ಹಿನ್ನೆಲೆಯಲ್ಲಿ ಸುದೀರ್ಘ ಕಾಲದ ಹೋರಾಟವಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಳೆದ 75 ವರ್ಷಗಳಿಂದ ನಿರಂತರವಾಗಿ ಆರೋಗ್ಯ ಕ್ಷೇತ್ರಕ್ಕೆ ಪ್ರಾಮುಖ್ಯತೆ ಕೊಡುತ್ತಾ ಬಂದಿವೆ. ▶▶ 7ನೇ ಪುಟಕ್ಕೆ...

# ಕತ್ತಲಾಗಿದ್ದ ಬದುಕಿಗೆ ಬೆಳಕಾದ ಶ್ರೀದೇವಿ ಆಸ್ಪತ್ರೆ

ವೈದ್ಯೋ ನಾರಾಯಣ ಹರಿಃ ಎಂಬ ಉಕ್ತಿಯಂತೆ ವೈದ್ಯನಾದವನು ದೇವರಿಗೆ ಸಮಾನವಾದವನು. ಆತನು ರೋಗಿಯ ರೋಗವನ್ನು ಪರಿಹರಿಸುವಾತ. ಮುಚ್ಚುಮರೆ ಮಾಡದೇ ರೋಗಿಯು ತನ್ನ ಅಂತರಂಗವನ್ನು ಬಿಚ್ಚಿಡುವುದು ಕೇವಲ ವೈದ್ಯನ ಮುಂದೆ ಮಾತ್ರ. ಹೀಗಾಗಿ ಆತನು ಕೇವಲ ರೋಗ ಪರಿಹಾರಕನಾಗಿರದೇ ರೋಗಿಯ ಸಹಚಿಂತಕನೂ ಆಗಿರುತ್ತಾನೆಂದು ಹೇಳಬಹುದು. ಇಂತಹ ದೇವರಿರುವ ಆಸ್ಪತ್ರೆ ದೇವಸ್ಥಾನಕ್ಕೆ ಸಮ.

ಇಂತಹ ವೈದ್ಯೋದೇಗುಲಕ್ಕೆ ಬಂದವರು ವರ ಪಡೆಯದೇ ಹೋಗುವುದಿಲ್ಲ. ಆರೋಗ್ಯವೆಂಬ ವರವ ಕೊಡುವ ಆಸ್ಪತ್ರೆಯೇ ತುಮಕೂರಿನ ಈ ಶ್ರೀದೇವಿ ಆಸ್ಪತ್ರೆ. ಇಲ್ಲಿ ಚಿಕಿತ್ಸೆಗೆ ಬಂದವರು ಗುಣಮುಖರಾಗದೇ ಹೋಗುವುದಿಲ್ಲ. ಅದೆಂಥದ್ದೇ ಖಾಯಿಲೆ ಇರಲಿ... ಅದೆಂಥದ್ದೇ ಸಮಸ್ಯೆ ಇರಲಿ... ಇಲ್ಲಿನ ವೈದ್ಯರು ರೋಗಿಗಳನ್ನು ಗುಣಪಡಿಸದೇ ಕಳುಹಿಸುವುದಿಲ್ಲ.

ಉತ್ತಮ ಗುಣಮಟ್ಟ, ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳು, ವಿಶಾಲ ಕಟ್ಟಡ, ಸ್ವಚ್ಛತೆಗೆ ಆದ್ಯತೆ, ರೋಗಿಗಳ ಜೊತೆ ಉತ್ತಮ ಸಮಾಲೋಚನೆ, ಅತ್ಯುತ್ತಮ ಬಾಂಧವ್ಯ, ಎಲ್ಲದಕ್ಕಿಂತ ರೋಗಿ ಎಂಬ ಭಾವನೆ ಹೊಂದದೇ ಮನೆಯವರೆಂಬ ನಿಸ್ವಾರ್ಥ ಸೇವೆಯಲ್ಲಿ ಚಿಕಿತ್ಸೆ ಕೊಡುವ ಏಕೈಕ ಆಸ್ಪತ್ರೆಯೇ ಈ ಶ್ರೀದೇವಿ ಆಸ್ಪತ್ರೆ ಎಂದು ಹೇಳಲು ಅತಿಶಯೋಕ್ತಿಯಲ್ಲ.

ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಚಿಕಿತ್ಸೆ ಕೊಟ್ಟು, ಸಂಪೂರ್ಣ ಗುಣಮುಖರನ್ನಾಗಿ ಮಾಡುವುದೇ ಈ ಆಸ್ಪತ್ರೆಯ ಮೂಲ ಧ್ಯೇಯ. ತುಮಕೂರಿನ ಶಿರಾ ರಸ್ತೆಯಲ್ಲಿರುವ ಈ ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಸೇವೆ ಹೇಗಿದೆ ಎಂಬುದಕ್ಕೆ ಕತ್ತಲು ತುಂಬಿದ್ದ ವ್ಯಕ್ತಿಯ ಬದುಕಿನಲ್ಲಿ ಬೆಳಕು ಹರಿಸಿದ್ದೇ ಸಾಕ್ಷಿ.

ಇವರು ಚಂದ್ರಶೇಖರ್. ತುಮಕೂರು ಜಿಲ್ಲೆಯ ಹೊರಕೆರೆಯ ಹೊನ್ನವಳ್ಳಿ ಬಳಿ ಇರುವ ಕಾಲದೇಪುರದವರು. ಮೂಲತಃ ವ್ಯವಸಾಯ ಮಾಡಿಕೊಂಡಿದ್ದರು. ಇತ್ತೀಚೆಗೆ ಇವರ ಕಣ್ಣುಗಳು ಸರಿಯಾಗಿ ಕಾಣಿಸುತ್ತಿರಲಿಲ್ಲ. ಅದಕ್ಕಾಗಿ ಮಧುಗಿರಿ ಹತ್ತಿರದ ಒಂದು ಆಸ್ಪತ್ರೆಯಲ್ಲಿ ಕಣ್ಣು ತೋರಿಸಿದ್ದರು. ಆಗ ವೈದ್ಯರು ಸಿಟಿ ಸ್ಕ್ಯಾನ್ ಮಾಡಿಸಲು ಹೇಳಿದ್ದರು. ಬಳಿಕ ಸಿಟಿ ಸ್ಕ್ಯಾನ್ ರಿಪೋರ್ಟ್ ನೋಡಿದ್ದ ವೈದ್ಯರು, ಬ್ರೇನ್ ಟ್ಯೂಮರ್ ಇದೆ. ಕೂಡಲೇ ಆಪರೇಷನ್ ಮಾಡಬೇಕು. ಅದಕ್ಕಾಗಿ 5 ಲಕ್ಷ ರೂಪಾಯಿ ವೆಚ್ಚ ತಗುಲುತ್ತದೆ. ಶೀಘ್ರವೇ ಮಾಡಿಸದಿದ್ದರೆ, ಎರಡೂ ಕಣ್ಣುಗಳೂ ಕಾಣದಂತಾಗುತ್ತವೆ ಎಂದು ಹೇಳಿದ್ದರು.

ಚಂದ್ರಶೇಖರ್ ಅವರ ಮನೆಯಲ್ಲಿ ಬಡತನ. ಅಷ್ಟು ಹಣ ಹೇಗೆ ಹೊಂದಿಸುವುದು, ತರುವುದು ಎಂದು ಯೋಚಿಸಿ, ಬೆಂಗಳೂರಿನ ಮಿಂಟೋ ಆಸ್ಪತ್ರೆಗೆ ಹೋಗೋಣವೆಂದು ನಿರ್ಧರಿಸಿದರು. ಅಷ್ಟರಲ್ಲಿ ಸ್ನೇಹಿತರೊಬ್ಬರು ತುಮಕೂರಿನ ಶ್ರೀದೇವಿ ಆಸ್ಪತ್ರೆಗೆ ಹೋಗುವಂತೆ ಸಲಹೆ ನೀಡಿದರಂತೆ. ಅಲ್ಲಿಗೆ ಹೋದರೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ದೊರೆಯುತ್ತದೆ ಹಾಗೂ ಇತರೆ ಎಲ್ಲಾ ಆಸ್ಪತ್ರೆಗಳಿಗಿಂತ ಉತ್ತಮ ಗುಣಮಟ್ಟದ ಚಿಕಿತ್ಸೆಯೂ ಲಭ್ಯವಾಗಲಿದೆ ಎಂದು ಸಲಹೆ ಕೊಟ್ಟಿದ್ದರಂತೆ.

ಆ ಸಲಹೆಯಂತೆ ಚಂದ್ರಶೇಖರ್ ಅವರು, ತಮ್ಮ ಸಹೋದರ ಉಮೇಶ್ ಜೊತೆ ತುಮಕೂರಿನ ಶ್ರೀದೇವಿ ಆಸ್ಪತ್ರೆಗೆ ಬಂದು ವೈದ್ಯರನ್ನು ಭೇಟಿಯಾದ ಬಳಿಕ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಎಂಆರ್‌ಐ ಸ್ಕ್ಯಾನ್, ಚೆಕಪ್ ಮಾಡಿದ ವೈದ್ಯರು, ಚಂದ್ರಶೇಖರ್‌ಗೆ ಪಿಟ್ಯೂಟರಿ ಟ್ಯೂಮರ್ ಇರುವುದನ್ನು ದೃಢೀಕರಿಸಿದ್ದಾರೆ. ಅಷ್ಟೇ ಅಲ್ಲ, ಆಪರೇಷನ್ ಮಾಡುವುದಾಗಿ ಭರವಸೆ ನೀಡಿದ್ದಾರೆ. ಅದರಂತೆ ಚಂದ್ರಶೇಖರ್ ಅವರಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಿದ ವೈದ್ಯರು, ಕಡಿಮೆ ಖರ್ಚಿನಲ್ಲಿ ಉತ್ತಮ ಚಿಕಿತ್ಸೆ ನೀಡಿದ್ದಾರೆ.

ಚಂದ್ರಶೇಖರ್‌ಗೆ ಈಗ ಕಣ್ಣು ಸಂಪೂರ್ಣವಾಗಿ ಕಾಣುತ್ತಿವೆ. ಸಹೋದರ ಉಮೇಶ್ ಅವರೇ ಹೇಳುವ ಪ್ರಕಾರ, ಬೇರೆ ಆಸ್ಪತ್ರೆಗೆ ಹೋಗಿದ್ದರೆ, ಐದಾರು ಲಕ್ಷ ರೂಪಾಯಿ ಆಗುತ್ತಿತ್ತಂತೆ. ಶ್ರೀದೇವಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದರಿಂದ ಶೇ.80ರಷ್ಟು ಹಣ ಉಳಿತಾಯವಾಗಿದೆಯಂತೆ. ಚಿಕಿತ್ಸೆಗೂ ಮುನ್ನ ಬಲಗಡೆಯ ಕಣ್ಣು ಕಾಣುತ್ತಲೇ ಇರಲಿಲ್ಲ. ಕೇವಲ



ಎಡಗಣ್ಣಿನಿಂದ ಮಾತ್ರ ಜಗತ್ತನ್ನು ನೋಡುತ್ತಿದ್ದರು. ಚಿಕಿತ್ಸೆ ಬಳಿಕ ಈಗ ಎರಡೂ ಕಣ್ಣುಗಳು ಕಾಣಿಸುತ್ತಿವೆ.

ವೈದ್ಯರು ಹೇಳುವ ಪ್ರಕಾರ, ಪಿಟ್ಯೂಟರಿ ಟ್ಯೂಮರ್ ಎಂಬುದು ನರಗಳ ಮೂಲಕ ಬರುವಂತದ್ದು. ಮನುಷ್ಯನಲ್ಲಿ ಆಪ್ಟಿಕ್ ನರ್ವ್ ಎಂಬುದು ಇರುತ್ತದೆ. ಈ ನರ್ವ್ ಮೂಲಕವೇ ದೃಷ್ಟಿ ಬರುವುದು. ಯಾವಾಗ ಈ ನರ್ವ್ ಕಂಪ್ರೆಸ್ ಆಗುತ್ತೋ ಆಗ ಕಣ್ಣುಗಳು ನಿಧಾನವಾಗಿ ಕಾಣಿಸದೇ ಹೋಗುತ್ತವೆ. ಈ ಟ್ಯೂಮರ್‌ನಿಂದ ಬಳಲುತ್ತಿರುವವರ ಪೈಕಿ ಕೆಲವರು ಇದ್ದಕ್ಕಿದ್ದಂತೇ ದಪ್ಪ ಆಗುತ್ತಾರೆ. ದೃಷ್ಟಿ ಕಳೆದುಕೊಳ್ಳುತ್ತಾರೆ. ಕೆಲವರಿಗೆ ಕೈ, ಮೈ, ಚರ್ಮ, ಬೆರಳು ಎಲ್ಲಾ ದಪ್ಪ ಆಗಿಬಿಡುತ್ತವೆ. ಇನ್ನು ಕೆಲವರಿಗೆ ಮೂತ್ರವೇ ಜಾಸ್ತಿ ಹೋಗುತ್ತಿರುತ್ತದೆ, ಮೆದುಳು ಸರಿಯಾಗಿ ಕೆಲಸ ಮಾಡುವುದಿಲ್ಲ. ಆಗ ಏನೇನೋ ಪೆದ್ದು ಪೆದ್ದಾಗಿ ಮಾತನಾಡುತ್ತಾರೆ.

ತುಮಕೂರಿನ ಚಂದ್ರಶೇಖರ್ ಅವರಿಗೆ ಪಿಟ್ಯೂಟರಿ ಟ್ಯೂಮರ್ ಇದ್ದಿದ್ದರಿಂದ ಸರ್ಜರಿ ಬಿಟ್ಟು ಬೇರೆ ಆಯ್ಕೆ ಇರಲಿಲ್ಲ. ಆದರೆ, ಆಪರೇಷನ್‌ನಲ್ಲಿ ಎರಡು ಆಯ್ಕೆಗಳಿರುತ್ತವೆ. ಒಂದು ತಲೆ ಮೂಳೆ ತೆಗೆದು ಆಪರೇಷನ್ ಮಾಡುವುದು. ▶▶ 7ನೇ ಪುಟಕ್ಕೆ...



■ ಡಾ. ಲಾವಣ್ಯ ರಮಣ ಹುಲಿನಾಯ್ಕರ್
ನೇತ್ರ ತಜ್ಞರು
lavanya.pillappa@gmail.com



# ಸರ್ವ ದಾನಗಳಿಗಿಂತಲೂ ಶ್ರೇಷ್ಠ ದಾನ ನೇತ್ರದಾನ

ಮನುಷ್ಯನಿಗೆ ತನ್ನ ಜೀವಿತಾವಧಿಯ ನಂತರವು ಒಳ್ಳೆಯ ಕಾರ್ಯಗಳಿಗೆ ತನ್ನನ್ನು ಜನರು ಜ್ಞಾಪಿಸಿಕೊಳ್ಳಬೇಕು ಎಂಬ ಬಯಕೆಯಿರುತ್ತದೆ. ಎಲ್ಲರೂ ಶ್ರೀಮಂತರಾಗಿ ದಾನಧರ್ಮಗಳಿಂದ ತಮ್ಮ ಹೆಸರನ್ನು ಶಾಶ್ವತವಾಗಿರುವಂತೆ ಮಾಡಿಕೊಳ್ಳಲು ಸಾಧ್ಯವಿರುವುದಿಲ್ಲ. ಅಧಿಕಾರ, ಅಂತಸ್ತುಗಳಿಂದ ಅಗಣಿತವಾದ ಜನೋಪಯೋಗಿ ಕಾರ್ಯ ಮಾಡಿ ಚಿರಂಜೀವಿಯಾಗಿರಲು ಸಾಧ್ಯವಿರುವುದಿಲ್ಲ. ಸೃಜನಶೀಲ ಪ್ರತಿಭೆ ಪಡೆದು ಅಪರೂಪದ ಕಲಾಕೃತಿಯನ್ನು ಜಗತ್ತಿಗೆ ನೀಡಿ ಆ ಮೂಲಕ ಶಾಶ್ವತವಾದ ಕೀರ್ತಿ ಪಡೆಯಲು ಸಾಧ್ಯವಾಗಿರುವುದಿಲ್ಲ.

ಇಂತಹ 'ಇಲ್ಲ'ಗಳ ನಡುವೆಯೂ ಮನುಷ್ಯ ಬದುಕಿದ್ದಾಗಲೇ ಉದಾರಿಯಾಗಿ ಆಲೋಚನೆ ಮಾಡಿದರೆ ತನ್ನ ಕಣ್ಣುಗಳಿಂದಲೇ ಆತ ಶಾಶ್ವತವಾಗಿ ಉಳಿಯಬಹುದು. ಅದನ್ನೇ 'ನೇತ್ರದಾನ' ಎನ್ನುವುದು. ಶರೀರದ ಅಂಗಾಂಗಗಳನ್ನು ದಾನ ಮಾಡಿದವರನ್ನು ವೀರಯೋಧರು ಎಂದು, ಅಂತಹವರಿಗೆ ಸದ್ಗತಿ ದೊರೆಯುತ್ತದೆ ಎಂದು ಜ್ಞಾನಿಗಳು ಹೇಳುತ್ತಾರೆ.

ಬದುಕಿದ್ದಾಗಲೇ ತಮ್ಮಲ್ಲಿರುವ 'ಕಿಡ್ನಿ' ಹಾಗೂ 'ಲಿವರ್'ಗಳನ್ನು ದಾನ ಮಾಡಿ ಅನೇಕರ ಪ್ರಾಣ ಉಳಿಸಿದ ಘಟನೆಗಳು ಹಲವು ಇವೆ. ಮನುಷ್ಯ ನಿಧನನಾದ ಮೇಲೆ ದಾನ ಮಾಡುವ ಅಂಗವೇ 'ನೇತ್ರ'. ಮನುಷ್ಯ ಪ್ರಾಣ ತೊರೆದು ಆರು ಘಂಟೆಯೊಳಗೆ 'ನೇತ್ರದಾನ' ಮಾಡಿದರೆ ಅನೇಕರ ಬದುಕಿಗೆ ಬೆಳಕು ನೀಡಿದಂತೆ ಎನ್ನಲಾಗಿದೆ. ಮನುಷ್ಯನ ಉಸಿರು ನಿಂತ ತಕ್ಷಣ ಆತನ ಕಣ್ಣುಗಳನ್ನು ಮುಚ್ಚಿ ಅದರ ಮೇಲೆ ಮಂಜಿನಗಡ್ಡೆ ಇಡಬೇಕು. ಅಲ್ಲಿ ಫ್ಯಾನ್ ಹಾಕಿರಬಾರದು. ವೈದ್ಯರು ಬಂದು ಕಣ್ಣಿನ ಕರಿಗುಡ್ಡೆಯ ಜೊತೆಯಲ್ಲಿ ಕಾರ್ನಿಯಾವನ್ನು ತೆಗೆಯುತ್ತಾರೆ. ಅದರಿಂದ ಮುಖ ವಿಕಾರವಾಗುವುದಿಲ್ಲ. ಅನೇಕರು ಕಣ್ಣನ್ನು ತೆಗೆದುಕೊಳ್ಳುತ್ತಾರೆ ಎಂಬ ತಪ್ಪು ಅಭಿಪ್ರಾಯ ಹೊಂದಿರುತ್ತಾರೆ. ಕೇವಲ ಕಾರ್ನಿಯಾವನ್ನು ಮಾತ್ರ ತೆಗೆದುಕೊಂಡು ಆ ಭಾಗಕ್ಕೆ ಹತ್ತಿಯನ್ನಿಟ್ಟು ಮುಖವನ್ನು ಸಹಜ ಸ್ಥಿತಿಗೆ ತರುತ್ತಾರೆ. ಯಾವುದೇ ಧಾರ್ಮಿಕಕ್ರಿಯೆಗೂ ಇದರಿಂದ ಅಡ್ಡಿ ಬರುವುದಿಲ್ಲ.

ಕರಿಗುಡ್ಡೆ (Cornea) ಯಿಂದ ಕಿರಣಗಳು ಹಿಂದೆ ಹೋಗುವುದಿಲ್ಲ. ಅಲ್ಲೊಂದು ಪರದೆಯಿರುತ್ತದೆ. ಅದನ್ನು ದಾಟಿ ಕಿರಣಗಳು ಹೋಗುವುದಿಲ್ಲ. ಕಣ್ಣಿನ ಕರಿಗುಡ್ಡೆ (ಪಾರದರ್ಶಕ ಪಟಲ–ಕಾರ್ನಿಯಾ) ಕಾರ್ನಿಯಾ ತೊಂದರೆಯಿಂದ ಭಾರತದಲ್ಲಿ 1.20 ಲಕ್ಷ ಭಾರತೀಯರು ಅಂಧರಾಗಿದ್ದಾರೆ. ಕಾರ್ನಿಯ ಕಣ್ಣಿನ ಪಾರದರ್ಶಕದ ಮುಂಭಾಗದ ಮೇಲ್ಮೆಯಾಗಿದೆ. ಕರಿಗುಡ್ಡೆಯ ಕಿರಣಗಳು Anter Chamber, Pisterio Chamber ಗಳನ್ನು ಹಾದು ರೆಟಿನಾ (Retina) ನರಗಳ ಮೂಲಕ ಮಿದುಳಿಗೆ ಹೋಗುತ್ತದೆ. ಅಲ್ಲಿ ಇಮೇಜ್ ರೂಪುಗೊಂಡು, ಮಿದುಳಿನ ಆಜ್ಞೆಯ ಅನುಸಾರ ಕಣ್ಣು ನೋಡಿದ್ದನ್ನು ಗ್ರಹಿಸಿ ಮುಂದಿನ ಪ್ರಕ್ರಿಯೆಗೆ ಸೂಚನೆ ದೊರೆಯುತ್ತದೆ. ಇಂತಹ ಕಿರಣಗಳು ಕಾರ್ನಿಯಾದಲ್ಲಿ ದೋಷವಿದ್ದ ಕಾರಣ ಕರಿಗುಡ್ಡೆಯು ಮುಂದಿನ ಪರದೆಯನ್ನು ದಾಟಿ ಹೋಗಲು ಸಾಧ್ಯವಾಗುವುದಿಲ್ಲ. ಆಗ ವ್ಯಕ್ತಿಗೆ ಏನೂ ಕಾಣಿಸಲು ಸಾಧ್ಯವಿಲ್ಲ. ಅದಕ್ಕೆ 'ಕಾರ್ನಿಯಾ ಬ್ಲೆಂಡ್ನೆಸ್' ಎನ್ನುತ್ತಾರೆ.

ದೇಶದಲ್ಲಿ 15 ದಶಲಕ್ಷ ಅಂಧರಿದ್ದಾರೆ. ಅದರಲ್ಲಿ 6.8 ದಶಲಕ್ಷ ಜನರು ಕಾರ್ನಿಯಲ್ ಅಂಧತ್ವದಿಂದ ಬಳಲುತ್ತಿದ್ದಾರೆ. ಕಣ್ಣಿನ ಪೊರೆ ಹಾಗೂ ಗ್ಲುಕೋಮಾದ ನಂತರ ಅಂಧತ್ವಕ್ಕೆ ಕಾರಣವಾಗುವ ಕಾರ್ನಿಯಲ್ ದುರ್ಬಲತೆ ಹೆಚ್ಚು ಅಪಾಯಕಾರಿ ಎನಿಸಿದೆ.

ಕಾರ್ನಿಯಲ್ ಅಂಧತ್ವವನ್ನು ನಿವಾರಣೆ ಮಾಡುವ ಸಾಧ್ಯತೆಯಿದೆ. ಕಾರ್ನಿಯಲ್ ಅಂಧತ್ವಕ್ಕೆ ಅನೇಕ ಕಾರಣಗಳಿವೆ. ಪ್ರತಿವರ್ಷ ಮೂವತ್ತು ಲಕ್ಷ ಜನರು ಸಹಜವಾಗಿ ಮರಣ ಹೊಂದುತ್ತಾರೆ. ಅದರಲ್ಲಿ ಶೇಕಡ 1ರಷ್ಟು ಜನ ತಮ್ಮ ಸಾವಿನ ನಂತರ ನೇತ್ರವನ್ನು ಉಪಯೋಗಿಸಿ ಎಂದು ದಾನ ಮಾಡಿದ್ದರೆ, ನಮ್ಮಲ್ಲಿ ಅಂಧತ್ವವೇ ಇರುತ್ತಿರಲಿಲ್ಲ.

ವ್ಯಕ್ತಿಯ 'ಕಣ್ಣಿನ ಕಾರ್ನಿಯಾ'ವನ್ನು ವಿಭಜಿಸಿ ನಾಲ್ಕು ಜನರಿಗೆ ಅದನ್ನು ಅಂಟಿಸುವ ಕೌಶಲ್ಯವುಳ್ಳ ನೇತ್ರ ಶಸ್ತ್ರಚಿಕಿತ್ಸಕರು ನಮ್ಮಲ್ಲಿದ್ದಾರೆ. ಅಂದರೆ ವ್ಯಕ್ತಿ ತನ್ನ ಎರಡು ಕಣ್ಣುಗಳನ್ನು ದಾನ ಮಾಡಿದ್ದರೆ ಎಂಟು ಜನರಿಗೆ ದೃಷ್ಟಿ ಬರುವಂತೆ ಮಾಡಬಹುದು.

ನೇತ್ರದಾನಕ್ಕೆ ಹೆಚ್ಚಿನ ಷರತ್ತುಗಳಿರುವುದಿಲ್ಲ. ಕನ್ನಡಕ ಧರಿಸಿದವರು, ಕಣ್ಣಿನ ಪೊರೆ ಆಪರೇಷನ್ ಮಾಡಿಸಿಕೊಂಡಿರುವವರು, ಗ್ಲುಕೋಮಾ ಕಾಯಿಲೆ ಶಸ್ತ್ರಚಿಕಿತ್ಸೆ ಮಾಡಿಕೊಂಡಿರುವವರು ಮತ್ತು ಮಧುಮೇಹ ರೋಗವುಳ್ಳವರು ಸಹ ತಮ್ಮ ಕಣ್ಣನ್ನು ದಾನ ಮಾಡಬಹುದು. ವಿಶೇಷ ಸಂದರ್ಭಗಳಲ್ಲಿ ಅಂದರೆ ಹೆಚ್.ಐ.ವಿ. ಬಾಧಿತರು ಮತ್ತು ಅಪಾಯಕಾರಿ ಸೋಂಕಿಗೊಳಗಾಗಿ ಮರಣ ಹೊಂದಿದವರ ಕಣ್ಣುಗಳನ್ನು ಪಡೆಯಲು ಬಯಸುವುದಿಲ್ಲ.

ವೈದ್ಯಕೀಯ ಸಂಶೋಧಕರು ಮತ್ತು ವಿಜ್ಞಾನಿಗಳು ಕೃತಕ ಕಾರ್ನಿಯಾವನ್ನು ಅಭಿವೃದ್ಧಿಪಡಿಸುವ ದಿಸೆಯಲ್ಲಿ ಉನ್ನತ ಮಟ್ಟದ ಸಂಶೋಧನೆ ನಡೆಸುತ್ತಿದ್ದಾರೆ. ಆ ಸಂಶೋಧನೆ ಫಲಪ್ರದವಾಗುವ ತನಕ ಕಾರ್ನಿಯಲ್ ಅಂಧತ್ವ ನಿವಾರಣೆಗೆ ಇರುವ ಏಕೈಕ ಮಾರ್ಗ ನೇತ್ರದಾನ ಮಾತ್ರವಾಗಿದೆ.

ಮೊತ್ತ ಮೊದಲ ಭಾರಿಗೆ 1905ರಲ್ಲಿ ಕಾರ್ನಿಯಾವನ್ನು ಬದಲಿಸುವ 'ಕೆರಾಟೊಪ್ಲಾಸ್ಟಿ' (Keroplasty) ಶಸ್ತ್ರಚಿಕಿತ್ಸೆ ಮಾಡಲಾಯಿತು. ಅಲ್ಲಿಂದ ವಿಶ್ವದಲ್ಲಿ ನಿರಂತರವಾಗಿ ಕಾರ್ನಿಯಾ ಲೇಪನದ ಶಸ್ತ್ರಚಿಕಿತ್ಸೆ ನಿರಂತರವಾಗಿ ನಡೆಯುತ್ತಿದೆ. 1944ರಲ್ಲಿ 'ನೇತ್ರ ಬ್ಯಾಂಕ್' ಪ್ರಾರಂಭವಾಯಿತು. ಇದರಿಂದಾಗಿ ಲಕ್ಷಾಂತರ ಜನ ದೃಷ್ಟಿ ಪಡೆದಿದ್ದಾರೆ.

'1985ರಲ್ಲಿ ಭಾರತ ಸರ್ಕಾರ ನೇತ್ರದಾನದ ಜಾಗೃತಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಿತು. ನೇತ್ರದಾನದ ಮಹತ್ವ ಸಾರುವ, ಜನರಲ್ಲಿ ಈ ವಿಚಾರದಲ್ಲಿ ಸದಭಿಪ್ರಾಯ ಮೂಡಿಸಲು ಪ್ರತಿವರ್ಷ ಆಗಸ್ಟ್ 25ರಿಂದ ಸೆಪ್ಟೆಂಬರ್ 8ರವರೆಗೆ ಹದಿನೈದು ದಿನಗಳ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ.

ಅನೇಕ ದೊಡ್ಡ ಆಸ್ಪತ್ರೆಗಳಲ್ಲಿ 'ನೇತ್ರ ಬ್ಯಾಂಕ್' ಇರುತ್ತದೆ. ಈಗ ಜನರಲ್ಲಿ ಅರಿವು ಬಂದಿದೆ. ತಮ್ಮ ಶರೀರವನ್ನು ವೈದ್ಯಕೀಯ ಕಾಲೇಜ್‌ಗೆ ದಾನ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಅಂತಹ ಸಂದರ್ಭದಲ್ಲಿ ಸಕಾಲದಲ್ಲಿ ಅವರ ನೇತ್ರಗಳನ್ನು ತೆಗೆದು ಸಂರಕ್ಷಣೆ ಮಾಡಲಾಗುತ್ತದೆ. ಈ ಸಂರಕ್ಷಣೆ ಮಾಡಲು ವಿಶೇಷವಾದ ರಾಸಾಯನಿಕ ದ್ರವಗಳ ಅಗತ್ಯವಿರುತ್ತದೆ. ಸಂಗ್ರಹಿಸಿದ ಕಾರ್ನಿಯಾವನ್ನು ಒಂದು ವರ್ಷದವರೆಗೆ ಇಡಬಹುದು.

ಶ್ರೀದೇವಿ ಆಸ್ಪತ್ರೆಯಲ್ಲಿರುವ ನೇತ್ರದಾನದ ಬ್ಯಾಂಕ್‌ನ ಪ್ರಯೋಜನವನ್ನು ಅನೇಕರು ಪಡೆದಿದ್ದಾರೆ. ಜೊತೆಗೆ ಅನೇಕ ಅಂಧರು ತಮಗೆ ನೇತ್ರದಾನದಿಂದ ಕಾರ್ನಿಯಾವನ್ನು ಶಸ್ತ್ರಚಿಕಿತ್ಸೆಯ ಮೂಲಕ ಜೋಡಿಸುವಂತೆ ನೋಂದಣಿ ಮಾಡಿಸಿಕೊಂಡಿದ್ದಾರೆ. ನಮಗೆ ಕಾರ್ನಿಯಾ ದೊರೆತ ತಕ್ಷಣ ಅವರನ್ನು ಸಂಪರ್ಕಿಸಿ ಅವರಿಗೆ ಶಸ್ತ್ರಚಿಕಿತ್ಸೆಯ ಮೂಲಕ ಕಾರ್ನಿಯಾವನ್ನು ಅಂಟಿಸಲಾಗುವುದು. ಈ ಆಪರೇಷನ್‌ಗೆ ಅಂತಹ ಭಾರಿ ವೆಚ್ಚವಾಗುವುದಿಲ್ಲ. ಸುಮಾರು ಹದಿನೈದು ಸಾವಿರ ರೂ.ಗಳಾಗಬಹುದು.

ಕರ್ನಾಟಕ ರಾಜ್ಯದಲ್ಲಿ ನೇತ್ರದಾನ ಕುರಿತು ವರನಟ, ನಟಸಾರ್ವಭೌಮ ಡಾ.ರಾಜಕುಮಾರ್ ಅವರು ಉಚಿತವಾಗಿ ನಾರಾಯಣ ನೇತ್ರಾಲಯದ ಮೂಲಕ ನೇತ್ರದಾನದ ಪ್ರಮುಖ ಅಂಬಾಸಿಡರ್ ಆಗಿ ಪ್ರಚಾರ ಮಾಡಿದ್ದಾರೆ.

ಜೊತೆಗೆ ಅವರು ತಮ್ಮ ನೇತ್ರಗಳನ್ನು ದಾನ ಮಾಡಿದ್ದಾರೆ. ಡಾ.ರಾಜಕುಮಾರ್ ಅವರ ಪ್ರಭಾವದಿಂದ ಲಕ್ಷಾಂತರ ಜನ ನೇತ್ರದಾನ ಮಾಡಿದ್ದಾರೆ. ಡಾ.ರಾಜಕುಮಾರ್ ಅವರ ಕೊನೆಯ ಮಗ ಪವರ್ ಸ್ಟಾರ್ ಪುನೀತ ರಾಜಕುಮಾರ್ ಸಹ ನೇತ್ರದಾನದ ಪ್ರಚಾರಕರಾಗಿದ್ದರು. ಅವರು ಸಹ ತಮ್ಮ ನೇತ್ರಗಳನ್ನು ದಾನ ಮಾಡಿದ್ದಾರೆ. ಈ ಕಾರ್ಯ ನಿರಂತರವಾಗಿ ಮುಂದುವರಿಯ ಬೇಕಾಗಿದೆ.

ತುಮಕೂರಿನ ಶ್ರೀದೇವಿ ವೈದ್ಯಕೀಯ ಮತ್ತು ಸಂಶೋಧನಾ ಕಾಲೇಜಿನಲ್ಲಿ 'ನೇತ್ರ ಬ್ಯಾಂಕ್' ಇದೆ. ನೇತ್ರದಾನದ ನಿರಂತರವಾದ ಅರಿವು ಮೂಡಿಸಲಾಗುತ್ತಿದೆ. ಅರ್ಹರಿಗೆ ಶಸ್ತ್ರಚಿಕಿತ್ಸೆ ಮಾಡಿ ದೃಷ್ಟಿ ಕೊಡಲಾಗುತ್ತಿದೆ.

■ ನಿರೂಪಣೆ: ಎನ್.ಭಾರತಿ

## ರಾಷ್ಟ್ರೀಯ ನೇತ್ರದಾನದ ಅರಿವು




"ದೇಶದಲ್ಲಿ ಲಕ್ಷಾಂತರ ಜನರು ಕಣ್ಣುಗಳಿಲ್ಲದೇ ಹಲವಾರು ಕಾರಣಗಳಿಂದ ದೃಷ್ಟಿಹೀನರಾಗುತ್ತಿದ್ದಾರೆ. ಅದರಲ್ಲಿ ಕಪ್ಪುಗುಡ್ಡೆ ಕಾಯಿಲೆಯಿಂದ ದೃಷ್ಟಿಹೀನರಾಗಿರುವವರು ಸಂಖ್ಯೆ ಹೆಚ್ಚಾಗಿದೆ. ಅಂತವರಿಗೆ ನೇತ್ರದಾನದ ಮೂಲಕ ಬೆಳಕು ನೀಡಲು ಸಾಧ್ಯವಿದೆ. ಅದಕ್ಕಾಗಿ ಎಲ್ಲರೂ ಸಾವಿನ ಬಳಿಕ ತಮ್ಮ ಕಣ್ಣುದಾನ ಮಾಡಲು ಮುಂದಾಗಬೇಕು, ಮರಣದ ನಂತರ ಸುಮಾರು ಆರು ಗಂಟೆಯೊಳಗೆ ಕಣ್ಣುಗಳನ್ನು ದಾನ ಮಾಡಬೇಕು. ಮನುಷ್ಯ ಚಿರಂಜೀವಿಯಾಗಿರಲು ಒಂದೇ ಸಾಧನ ನೇತ್ರದಾನ. ಸಾವಿನ ನಂತರ ಕಣ್ಣುಗಳನ್ನು ಸುಡುವುದು ಅಥವಾ ಹೂಳುವುದು ಮಾನವೀಯತೆಗೆ ಮಾಡುವ ದೊಡ್ಡ ಅಪಚಾರ. ನೇತ್ರದಾನ ಮಾಡಿದರೆ ಸತ್ತ ನಂತರವು ನಮ್ಮ ಕಣ್ಣುಗಳಿಂದ ಜಗತ್ತನ್ನು ನೋಡಲು ಸಾಧ್ಯವಿದೆ" ಎಂದು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಆಗಸ್ಟ್ 25 ರಿಂದ ಸೆ.8ರವರೆಗೆ 38ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕಯ ಬಗ್ಗೆ ಜಾಗೃತಿಯ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಎಂ. ಹುಲಿನಾಯ್ಕರ್‌ರವರು ಜಾಥಾಕ್ಕೆ ಚಾಲನೆ ನೀಡಿ "ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಲಕ್ಷಾಂತರ ಜನರು ಕಣ್ಣುಗಳಿಲ್ಲದೇ ಹಲವಾರು ಕಾರಣಗಳಿಂದ ದೃಷ್ಟಿಹೀನರಾಗುತ್ತಿದ್ದಾರೆ. ಮರಣಾನಂತರ ನೇತ್ರಗಳನ್ನು ದಾನ ಮಾಡುವುದರಿಂದ ಅಂಧರಿಬ್ಬರಿಗೆ ಬೆಳಕು ನೀಡಲು ಸಾಧ್ಯವಿದೆ. ಮಕ್ಕಳಲ್ಲಿ ದೃಷ್ಟಿದೋಷ ಕಂಡುಬಂದರೆ ಅಸಡ್ಡೆ ಮಾಡದೆ ನೇತ್ರತಜ್ಞರನ್ನು ಕಂಡು ಪರಿಹಾರ ಪಡೆದುಕೊಳ್ಳಬೇಕು" ಎಂದು ಪೋಷಕರಿಗೆ ಕಿವಿ ಮಾತು ಹೇಳಿದರು.

■ ವರದಿ: ಎನ್.ಆನಂದ

ಪತ್ರಿಕೆಯ ಬಳಗ

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**

**ಶಿಕ್ಷಣವು ಮನುಷ್ಯನ ಜೀವನದಲ್ಲಿ ಅತ್ಯಂತ ಪ್ರಮುಖ ಭಾಗವಾಗಿದೆ. ಒಬ್ಬ ವ್ಯಕ್ತಿಯು ಯಾವ ರೀತಿಯ ಶಿಕ್ಷಣವನ್ನು ಪಡೆಯುತ್ತಾನೆ ಎಂಬುದು ಮುಖ್ಯವಾಗಿ ಅವನು ಹೊಂದಿರುವ ಶಿಕ್ಷಕರ ಮೇಲೆ ಅವಲಂಬಿತವಾಗಿರುತ್ತದೆ. ಹಾಗಾಗಿ "ಒಳ್ಳೆಯ" ಶಿಕ್ಷಕರ ಪ್ರಾಮುಖ್ಯತೆ ಬಹಳ ಮುಖ್ಯ.**

**ಮನದ ಮಾತು**



**ಡಾ. ರಮಣ ಎಂ ಹುಲಿನಾಯ್ಕರ್**
ಕಾರ್ಯನಿರ್ವಾಹಕ ಸಂಪಾದಕರು
ನಿರ್ದೇಶಕರು, ಶ್ರೀದೇವಿ ವೈದ್ಯಕೀಯ ಕಾಲೇಜು

# ಒಳ್ಳೆಯ ಶಿಕ್ಷಕ ಅಂದರೆ ಯಾರು?

ನಾವು ನಮ್ಮ ಕ್ಯಾಂಪಸ್‌ನಲ್ಲಿ 2023ರ ಸೆಪ್ಟೆಂಬರ್ 5 ರಂದು ಪ್ರತಿ ವರ್ಷದಂತೆ ಈ ವರ್ಷವೂ ಶಿಕ್ಷಕರ ದಿನವನ್ನು ಆಚರಿಸಿದ್ದೇವೆ. ನಮ್ಮೆಲ್ಲರಿಗೂ ತಿಳಿದಿರುವಂತೆ ಮಾಜಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಸ್ಮರಣಾರ್ಥವಾಗಿ ಶಿಕ್ಷಕರ ದಿನವನ್ನು ಆಚರಿಸಲಾಗುತ್ತದೆ. ಅವರು ಪ್ರಸಿದ್ಧ ವಿದ್ವಾಂಸರು, ಶಿಕ್ಷಕರು ಹಾಗೂ ಶಿಕ್ಷಣದ ಉತ್ಕಟ ಪ್ರವರ್ತಕರಾಗಿದ್ದರು.

ಈ ದಿನವನ್ನು ನಮ್ಮ ಜೀವನದಲ್ಲಿ ಶಿಕ್ಷಕರ ಶ್ರಮ ಮತ್ತು ಪ್ರಾಮುಖ್ಯತೆಗೆ ಸಮರ್ಪಿಸಲಾಗುತ್ತದೆ. ಈ ದಿನವನ್ನು ಪ್ರಪಂಚದ ವಿವಿಧ ಭಾಗಗಳಲ್ಲಿ ವಿಭಿನ್ನ ದಿನಾಂಕಗಳಂದು ಆಚರಿಸಲಾಗುತ್ತದೆ. ಆದರೆ, ಭಾರತದಲ್ಲಿ ಶ್ರೀ ಎಸ್.ರಾಧಾಕೃಷ್ಣನ್ ಅವರ ಜನ್ಮ ವಾರ್ಷಿಕೋತ್ಸವದಂದು ಆಚರಿಸಲಾಗುತ್ತದೆ. "ನನ್ನ ಜನ್ಮ ದಿನವನ್ನು ಆಚರಿಸುವ ಬದಲು, ಸೆಪ್ಟೆಂಬರ್ 5 ಅನ್ನು ಶಿಕ್ಷಕರ ದಿನವನ್ನಾಗಿ ಆಚರಿಸಿದರೆ, ಅದು ನನಗೆ ಹೆಮ್ಮೆ ಹಾಗೂ ನನ್ನ ಭಾಗ್ಯ" ಎಂದು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಹೇಳಿದ್ದಾರೆ.

ಶಿಕ್ಷಣವು ಮನುಷ್ಯನ ಜೀವನದಲ್ಲಿ ಅತ್ಯಂತ ಪ್ರಮುಖ ಭಾಗವಾಗಿದೆ. ಒಬ್ಬ ವ್ಯಕ್ತಿಯು ಯಾವ ರೀತಿಯ ಶಿಕ್ಷಣವನ್ನು ಪಡೆಯುತ್ತಾನೆ ಎಂಬುದು ಮುಖ್ಯವಾಗಿ ಅವನು ಹೊಂದಿರುವ ಶಿಕ್ಷಕರ ಮೇಲೆ ಅವಲಂಬಿತವಾಗಿರುತ್ತದೆ. ಹಾಗಾಗಿ "ಒಳ್ಳೆಯ" ಶಿಕ್ಷಕರ ಪ್ರಾಮುಖ್ಯತೆ ಬಹಳ ಮುಖ್ಯ.

ಉತ್ತಮ ಶಿಕ್ಷಕರ ಗುಣಗಳನ್ನು ಪಡೆಯುವ ಮೊದಲು, ನಾನು ಇಂದು ಏನಾಗಿದ್ದೇನೆಯೋ, ಅದಕ್ಕೆ ಕಾರಣಕರ್ತರಾದ ನನ್ನ ಶಿಕ್ಷಕರ ಬಗ್ಗೆ ಕೆಲವು ಅನುಭವಗಳನ್ನು ಹಂಚಿಕೊಳ್ಳಲು ಬಯಸುತ್ತೇನೆ.

ನಿಮ್ಮ ಸ್ವಂತ ಶಿಕ್ಷಣದ ಬಗ್ಗೆ ನೀವು ಹಿಂದಿರುಗಿ ಯೋಚಿಸಿದಾಗ, ಒಬ್ಬ ಆದರ್ಶ ಶಿಕ್ಷಕರು ನಿಮಗೆ ಎದ್ದು ಕಾಣುತ್ತಾರೆ. ಅವರ ಪ್ರೋತ್ಸಾಹ ಮತ್ತು ಸ್ಫೂರ್ತಿಯ ಅಸಾಧಾರಣ ಮೂಲವಾಗಿ ಬಹುಶಃ ಒಬ್ಬ ಶಿಕ್ಷಕರಿರಬಹುದು. ಅಂತೆಯೇ ನನ್ನ ಜೀವನದಲ್ಲೂ ಸದಾ ಸ್ಮರಣೀಯರಾದ ವ್ಯಕ್ತಿ ಎಂದರೆ ಡಾ. ಜೈಶ್ರೀ ಘಾಣೇಕರ್. ಮುಂಬೈನಲ್ಲಿ ನನ್ನ ಎಂ.ಡಿ. ಜನರಲ್ ಮೆಡಿಸಿನ್ ಸ್ನಾತಕೋತ್ತರ ಕೋರ್ಸ್ ಸಮಯದಲ್ಲಿ ಅವರು ನನ್ನ ಶಿಕ್ಷಕಿಯಾಗಿದ್ದರು. ಅವರು ನವಿ ಮುಂಬೈನ ಎಂ.ಜಿ.ಎಂ.ವೈದ್ಯಕೀಯ ಕಾಲೇಜಿನಲ್ಲಿ ಪ್ರೊಫೆಸರ್ ಮತ್ತು ಮೆಡಿಸಿನ್ ವಿಭಾಗದ ಮುಖ್ಯಸ್ಥರಾಗಿದ್ದಾರೆ. ನಾನು ಅಲ್ಲಿ ನನ್ನ ಎಂಡಿ ಪೂರೈಸಿದೆ.

ನನ್ನ ಕೋರ್ಸ್‌ನ ಮೊದಲ ದಿನ, ನನ್ನ ತಂದೆ ನನ್ನನ್ನು ಕಾಲೇಜಿಗೆ ಬಿಡಲು ಬಂದಿದ್ದರು. ನಾವು ಸಿಹಿತಿಂಡಿಗಳು ಹಾಗೂ ಪುಷ್ಪಗುಚ್ಛವನ್ನು ತೆಗೆದುಕೊಂಡು ಅವರನ್ನು ಭೇಟಿಯಾಗಲು ಹೋದೆವು. ಅವರು ಅದನ್ನು ತೆಗೆದುಕೊಳ್ಳಲು



ಗುರುಗಳಾದ ಡಾ. ಜೈಶ್ರೀ ಘಾಣೇಕರ್ ಅವರೊಂದಿಗೆ ಡಾ. ರಮಣ ಎಂ. ಹುಲಿನಾಯ್ಕರ್ ದಂಪತಿಗಳು.

ನಿರಾಕರಿಸಿದರು. ಆ ಸಮಯದಲ್ಲಿ ನನಗೆ ಅವರ ಬಗ್ಗೆ ಕುತೂಹಲ ಮೂಡಿತು ಹಾಗೂ ನಂತರ ಅದಕ್ಕೆ ಕಾರಣವೂ ತಿಳಿಯಿತು. ಆಕೆ ಒಬ್ಬ ಪ್ರಾಮಾಣಿಕ, ನಿಷ್ಪಕ್ಷಪಾತ ಹಾಗೂ ಯಾವುದೇ ಪ್ರಭಾವಕ್ಕೆ ಒಳಗಾಗದ ವ್ಯಕ್ತಿ ಎಂದು ತದನಂತರ ನನಗೆ ಅರ್ಥವಾಯಿತು. ಇದು ನನಗೆ ಜೀವನದಲ್ಲಿ ನೈತಿಕತೆ ಮತ್ತು ನೈತಿಕ ಮೌಲ್ಯಗಳನ್ನು ಕಲಿಯುವಂತೆ ಮಾಡಿತು.

ಒಬ್ಬ ಜವಾಬ್ದಾರಿಯುತ ಶಿಕ್ಷಕ ಯಾವಾಗಲೂ ತನ್ನ ಕರ್ತವ್ಯಗಳಿಗೆ ಪ್ರಾಮುಖ್ಯತೆ ನೀಡುತ್ತಾನೆ. ಅಂತಹ ಶಿಕ್ಷಕರು ಯಾವಾಗಲೂ ತಮ್ಮ ಕಾರ್ಯವು ಸಂಪೂರ್ಣವಾಗಿ ಪೂರ್ಣಗೊಂಡಿದೆ ಎಂದು ಖಚಿತಪಡಿಸಿಕೊಳ್ಳಲು ಸಂಪೂರ್ಣ ಸಮರ್ಪಣೆಯೊಂದಿಗೆ ಕೆಲಸ ಮಾಡಲು ಪ್ರಯತ್ನಿಸುತ್ತಾರೆ. ಈ ಮನೋಭಾವವನ್ನು ಹೊಂದಿರುವ ಶಿಕ್ಷಕರು ತನ್ನ ವಿದ್ಯಾರ್ಥಿಗಳ ಬಗ್ಗೆ ನಿಜವಾದ ಸಹಾನುಭೂತಿಯನ್ನು ಹೊಂದಿರುತ್ತಾರೆ.

ನನ್ನ ಎಂಡಿ ತರಬೇತಿ ಕೋರ್ಸ್‌ನ ಆರಂಭಿಕ ದಿನಗಳು ಬಹಳ ಗೊಂದಲಮಯ ಹಾಗೂ ಕಠಿಣವಾಗಿದ್ದವು. ಆದರೆ, ಜೈಶ್ರೀ ಮೇಡಮ್ ಅವರು, ನಾವು ರೆಸಿಡೆನ್ಸಿ ತರಬೇತಿ ಕಾರ್ಯಕ್ರಮದೊಂದಿಗೆ ಹೊಂದಿಕೊಳ್ಳಬಹುದು ಎಂಬುದನ್ನು ಖಚಿತಪಡಿಸಿಕೊಂಡರು. ನಮ್ಮ ಯಾವುದೇ ಬೋಧನಾ ಕಾರ್ಯಕ್ರಮಗಳನ್ನು ಅವರು ಎಂದಿಗೂ ತಪ್ಪಿಸುತ್ತಿರಲಿಲ್ಲ. ನಾವು ಅಧ್ಯಯನದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸದಿದ್ದಾಗ ನಮ್ಮನ್ನು ಗದರಿಸುತ್ತಿದ್ದರು ಹಾಗೂ ರೋಗಿಗಳ ಆರೈಕೆಯಲ್ಲಿ ಬಹಳ ಕಟ್ಟುನಿಟ್ಟಾಗಿದ್ದರು. ರೋಗಿಯ ಆರೈಕೆಯಲ್ಲಿ ಯಾವುದೇ ಚಿಕ್ಕ ಆಲಸ್ಯವೂ ಅವರಿಗೆ ಅಪಾರ ಕೋಪವನ್ನು ಉಂಟುಮಾಡುತ್ತಿತ್ತು.

ಒಮ್ಮೆ ನಮ್ಮ ಮನೆಯಲ್ಲಿ ಸ್ವಲ್ಪ ಆರೋಗ್ಯ ತುರ್ತುಸ್ಥಿತಿ ಇತ್ತು. ಹಾಗಾಗಿ ನಾನು ಮನೆಗೆ ಹಿಂದಿರುಗಬೇಕಾಗಿತ್ತು. ನಾನು ಅಂದು ಕಾಲ್ ಡ್ಯೂಟಿಯಲ್ಲಿದ್ದೆ ಹಾಗೂ ನನ್ನ ಫ್ಲೈಟ್ ಮರುದಿನ ಮುಂಜಾನೆ ಇತ್ತು. ನನ್ನ ಕಾಲ್ ಡ್ಯೂಟಿಯಿಂದ ನನ್ನನ್ನು ಮುಕ್ತಗೊಳಿಸುವಂತೆ ನಾನು ಅವರನ್ನು ವಿನಂತಿಸಿದಾಗ, ನಾನು ವಿಮಾನ ನಿಲ್ದಾಣಕ್ಕೆ ಹೊರಡಬೇಕಾದ ಸಮಯದವರೆಗೆ ಡ್ಯೂಟಿ ಮಾಡಿ ನಂತರ ಆಸ್ಪತ್ರೆಯಿಂದ ಹೊರಡುವಂತೆ ಹೇಳಿದರು.

ನಾನು ಮನೆಗೆ ತಲುಪಿದ ನಂತರ, ತಕ್ಷಣ ನನ್ನನ್ನು ಪರೀಕ್ಷಿಸಿದರು ಹಾಗೂ ಅಲ್ಲಿನ ಸ್ಥಿತಿಯ ಬಗ್ಗೆ ವಿಚಾರಿಸಿದರು. ಅದನ್ನು ನಿಭಾಯಿಸಲು ನನಗೆ ಧೈರ್ಯ, ಸಲಹೆ, ಸೂಚನೆಗಳನ್ನು ನೀಡಿದರು. ಇದು ನನಗೆ ಜೀವನದಲ್ಲಿ ರೋಗಿಗಳ ಆರೈಕೆಯ ಬಗ್ಗೆ ಜವಾಬ್ದಾರಿಯುತ ಮತ್ತು ಕಟ್ಟುನಿಟ್ಟಾಗಿರುವಂತೆ ಹಾಗೂ ಜನರ ಬಗ್ಗೆ ಸಹಾನುಭೂತಿ ಮತ್ತು ಕಾಳಜಿಯನ್ನು ಹೊಂದುವಂತೆ ಮಾಡಿತು.

ಕೆಲವೇ ಕೆಲವು ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಶ್ರೇಷ್ಠತೆಯ ಕಡೆಗೆ ಸಮರ್ಪಿತರಾಗಿದ್ದಾರೆ ಮತ್ತು ಅವರನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ. ಅವರು ತಮ್ಮ ವಿದ್ಯಾರ್ಥಿಗಳ ಪಟ್ಟಿಯನ್ನು ಹೆಚ್ಚಿಸಲು ತಮ್ಮ ಮಟ್ಟದ ಅತ್ಯುತ್ತಮವಾದ ಕೆಲಸವನ್ನು ಮಾಡುತ್ತಾರೆ. ವಿದ್ಯಾರ್ಥಿಗಳಿಗೆ ಆತ್ಮವಿಶ್ವಾಸವನ್ನು ನೀಡುವ ಸಲುವಾಗಿ ಅವರು ಯಾವಾಗಲೂ ತಮ್ಮ ವಿದ್ಯಾರ್ಥಿಗಳಿಂದ ಉತ್ತಮವಾದುದ್ದನ್ನು ನಿರೀಕ್ಷಿಸುತ್ತಾರೆ. ತರಗತಿಯಲ್ಲಿ ಬೋಧನೆ ಮಾಡುವುದರ ಜೊತೆಗೆ, ಶಿಕ್ಷಕರು ವಿದ್ಯಾರ್ಥಿಗಳ ಬೆಳವಣಿಗೆಗೆ ಸಹೋದ್ಯೋಗಿಗಳು, ಪೋಷಕರು ಮತ್ತು ಸ್ನೇಹಿತರೊಂದಿಗೆ ಸಂವಹನ ಮಾಡಬೇಕಾಗುತ್ತದೆ.

ಇದಕ್ಕೆ ಸಂಬಂಧಿಸಿದಂತೆ ನಾನು ಒಂದು ಘಟನೆಯನ್ನು ಹಂಚಿಕೊಳ್ಳಲು ಬಯಸುತ್ತೇನೆ. ನನ್ನ ಕೋರ್ಸ್‌ನ ಒಂದು ಸಣ್ಣ ಅವಧಿಯಲ್ಲಿ, ನಾನು ಅಧ್ಯಯನದಲ್ಲಿ ಸ್ವಲ್ಪ ಮಂದಗತಿಯಲ್ಲಿದ್ದೆ. ಪಿಜಿ ತರಬೇತಿ ಕಾರ್ಯಕ್ರಮವೊಂದರಲ್ಲಿ ನಾನು ಸರಿಯಾಗಿ ಓದಲಿಲ್ಲ ಮತ್ತು ಸೆಮಿನಾರ್ ಅನ್ನು ಕಳಪೆಯಾಗಿ ಪ್ರಸ್ತುತಪಡಿಸಿದೆ. ಇದನ್ನು ನೋಡಿದ ಮೇಡಂ ತರಗತಿಯಿಂದ ಹೊರನಡೆದರು. ನಂತರ, ಅವರು ನನ್ನ ಸಹೋದ್ಯೋಗಿಗಳು, ಸ್ನೇಹಿತರು ಮತ್ತು ಹಿರಿಯರೊಂದಿಗೆ ನನ್ನ ಕಳಪೆ ಪ್ರದರ್ಶನದ ಕಾರಣ ಹಾಗೂ ಅಧ್ಯಯನದ ಆಸಕ್ತಿಯನ್ನು ಕೇಳಿದರು. ನಂತರ ನನ್ನನ್ನು ಕರೆದು, ನನ್ನ ಗಮನವನ್ನು ಅಧ್ಯಯನದ ಮೇಲೆ ಕೇಂದ್ರೀಕರಿಸಲು ಸಲಹೆ ನೀಡಿದರು. ನನ್ನ ನಿಜವಾದ ಸಾಮರ್ಥ್ಯವನ್ನು ತಲುಪಲು ಹಾಗೂ ರೆಸಿಡೆನ್ಸಿ ತರಬೇತಿಯನ್ನು ಅನಗತ್ಯ ಗೊಂದಲಗಳೊಂದಿಗೆ ವ್ಯರ್ಥ ಮಾಡದಂತೆ ನನ್ನನ್ನು ಪ್ರೋತ್ಸಾಹಿಸಿದರು. ಅವರು ನನ್ನಲ್ಲಿ ತೋರಿದ ಆಸಕ್ತಿ ಮತ್ತು ಕಾಳಜಿಯು ನನ್ನ ಮನೋಭಾವವನ್ನು ಬದಲಾಯಿಸುವಂತೆ ಮಾಡಿತು ಮತ್ತು ಉತ್ತಮ ವಿದ್ಯಾರ್ಥಿಯಾಗಲು ನನ್ನನ್ನು ಪ್ರೋತ್ಸಾಹ ನೀಡಿತು ಹಾಗೂ ಉತ್ತಮ ವೈದ್ಯನಾಗಲು ಮತ್ತು ಎಲ್ಲಕ್ಕಿಂತಲೂ ಹೆಚ್ಚಾಗಿ ಒಳ್ಳೆಯ ಮನುಷ್ಯನಾಗುವಂತೆ ಮಾಡಲು ನನ್ನನ್ನು ಪ್ರೇರಣೆ ನೀಡಿತು.

ಅಮೇರಿಕ್ ಚಿಂತಕ ವಿಲಿಯಂ ಎ ವಾರ್ಡ್ ಹೇಳುತ್ತಾರೆ, "ಸಾಧಾರಣ ಶಿಕ್ಷಕ ಹೇಳುತ್ತಾನೆ. ಉತ್ತಮ ಶಿಕ್ಷಕ ವಿವರಿಸುತ್ತಾನೆ. ಉನ್ನತ ಶಿಕ್ಷಕ ಪ್ರದರ್ಶಿಸುತ್ತಾನೆ. ಶ್ರೇಷ್ಠ ಶಿಕ್ಷಕ ಸ್ಫೂರ್ತಿ ನೀಡುತ್ತಾನೆ."

ಶ್ರೇಷ್ಠ ಶಿಕ್ಷಕರನ್ನು ವ್ಯಾಖ್ಯಾನಿಸುವ ಒಂದು ಗುಣವಿದ್ದರೆ, ಅದು "ಕಾಳಜಿ" – ಅವರು ಏನು ಕಲಿಸುತ್ತಾರೆ, ಯಾರಿಗೆ ಕಲಿಸುತ್ತಾರೆ ಮತ್ತು ಏಕೆ ಕಲಿಸುತ್ತಾರೆ ಎಂಬುದರ ಬಗ್ಗೆ ಅವರು ಕಾಳಜಿ ವಹಿಸುತ್ತಾರೆ. "ಉತ್ತಮ ಶಿಕ್ಷಕ" ಎಂಬುದು ಸಿದ್ಧಪಡಿಸಿದ ಉತ್ಪನ್ನ ಅಥವಾ ಅಂತಿಮ ಸ್ಥಿತಿಯಲ್ಲ. ಆದರೆ ಆವಿಷ್ಕಾರ ಮತ್ತು ಬದಲಾವಣೆಯ ನಿರಂತರ ಪ್ರಕ್ರಿಯೆ ಎಂದು ಸಹ ಅರ್ಥೈಸಿಕೊಳ್ಳಲಾಗಿದೆ.

ಹಾಗಾದರೆ ಉತ್ತಮ ಶಿಕ್ಷಕರ ಗುಣಗಳ ವಿಷಯಕ್ಕೆ ಹಿಂತಿರುಗಿದಾಗ, ನಾವು ನಮ್ಮನ್ನು ಪ್ರಶ್ನಿಸಿಕೊಳ್ಳಬೇಕಿದೆ – ನಮ್ಮ ವಿದ್ಯಾರ್ಥಿಗಳು ಹಿಂತಿರುಗಿ ನೋಡುತ್ತಾರೆ ಮತ್ತು ತಮ್ಮ ಜೀವನವನ್ನು ಉತ್ತಮವಾಗಿ ರೂಪಿಸಿದ ವ್ಯಕ್ತಿ ಎಂದು ನೆನಪಿಸಿಕೊಳ್ಳುತ್ತಾರೆಯೇ...?

ನಾನು ಪ್ರತಿ ಶಿಕ್ಷಕರ ದಿನವನ್ನು ನನ್ನ ಗುರುಗಳಾದ ಡಾ. ಜೈಶ್ರೀ ಘಾಣೇಕರ್ ಅವರಿಗೆ ಮತ್ತು ನನಗೆ ಕಲಿಸಿದ ಎಲ್ಲಾ ಶಿಕ್ಷಕರಿಗೆ ಅರ್ಪಿಸುತ್ತೇನೆ. ನಾನು ಈ ದಿನವನ್ನು ನನ್ನ ಶಿಕ್ಷಕ ಮಿತ್ರರಿಗೂ ಅರ್ಪಿಸುತ್ತೇನೆ. ಎಲ್ಲಾ ಸವಾಲುಗಳ ನಡುವೆಯೂ, ಒಂದು ಸಮಯದಲ್ಲಿ ಜಗತ್ತನ್ನು ಬದಲಾಯಿಸಲು ನೀವು ಮಾಡುವ ಎಲ್ಲಾ ಕಾರ್ಯಗಳಿಗಾಗಿ ನಿಮಗೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

**▪ ಕನ್ನಡಕ್ಕೆ: ಬಿ.ಎಂ.ಸುನೀತಾ**

# ನೇತ್ರದಾನ ಜಾಗೃತಿಗೆ ಶ್ರೀದೇವಿ ವೈದ್ಯಕೀಯ ಕಾಲೇಜಿನ ಕೊಡುಗೆ

ನೇತ್ರದಾದನ ಕುರಿತು ಸಮಾಜದಲ್ಲಿರುವ ಮೌಢ್ಯ ಮತ್ತು ತಪ್ಪು ಕಲ್ಪನೆಯನ್ನು ತೊಡೆದು ಹಾಕುವುದು ಈ ನೇತ್ರದಾನದ ಜಾಗೃತಿ ಕಾರ್ಯಕ್ರಮವ ಉದ್ದೇಶ. ಕಾರ್ನಿಯಾ ಅಂಧತ್ವದಿಂದ ಭಾರತದಲ್ಲಿ ಹತ್ತು ಲಕ್ಷ ಜನ ಬಳಲುತ್ತಿದ್ದಾರೆ. ಅವರುಗಳು ನೇತ್ರದಾನಿಗಳಿಗಾಗಿ ಕಾಯುತ್ತಿದ್ದಾರೆ. ಭಾರತದಲ್ಲಿ ಕಾರ್ನಿಯಾ ಅಂಧತ್ವದಿಂದ ಬಳಲುತ್ತಿರುವವರು ಹಾಗೂ ನೇತ್ರದಾನಿಗಳ ಪ್ರಮಾಣದಲ್ಲಿ ಅಗಾಧವಾದ ವ್ಯತ್ಯಾಸವಿದೆ. ನೇತ್ರದಾನಕ್ಕೆ ಅರಿವಿನ ಕೊರತೆಯಿಂದ ಜನರು ಮುಂದೆ ಬರುತ್ತಿಲ್ಲ. ಶ್ರೀದೇವಿ ವೈದ್ಯಕೀಯ ಕಾಲೇಜಿನ ನೇತ್ರ ವೈದ್ಯಶಾಸ್ತ್ರ ವಿಭಾಗ ನೇತ್ರದಾನ ಮಹತ್ವ ಕುರಿತು ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ತುಮಕೂರಿನ ಟೌನ್‌ಹಾಲ್‌ನಿಂದ ಸಿರಾ ಗೇಟ್ ತನಕ ಈ ಜಾಥಾ ಸಾಗಿತ್ತು. ಇದರಲ್ಲಿ 400 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳು, ವೈದ್ಯಕೀಯ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮತ್ತು ಆಸಕ್ತ ಸಾರ್ವಜನಿಕರು ಪಾಲ್ಗೊಂಡಿದ್ದರು.

**'ವ್ಯರ್ಥಾ ಸಾವಿನಗಿಂತ ಅಂಧರೊಬ್ಬರಿಗೆ ಬೆಳಕು ನೀಡಬಾರದೇ"**
**'ವ್ಯಕ್ತಿ ಮಾನವೀಯತೆಗೆ ನೀಡುವ ದೊಡ್ಡ ಕೊಡುಗೆ ದೃಷ್ಟಿದಾನ'**
**'ಜ್ಞಾನಿ ಸಾವಿನ ನಂತರವು ಉಳಿಯುವುದು ನೇತ್ರದಾನದ ಮೂಲಕ'**
**'ವ್ಯಕ್ತಿ ಸಾವಿನ ನಂತರವು ಇಬ್ಬರಿಗೆ ಬೆಳಕು ನೀಡಬಲ್ಲ, ಯೋಚಿಸಿ, ನೇತ್ರದಾನ ಮಾಡಿ'**


ಜಾಥಾದಲ್ಲಿ ಬೀದಿನಾಟಕ ಮತ್ತು ನೇತ್ರದಾನ ವಿಚಾರದಲ್ಲಿದ್ದ ತಪ್ಪು ಕಲ್ಪನೆ ನೀಗುವ ವಿಚಾರಗಳಿಗೆ ಆದ್ಯತೆ ಕೊಡಲಾಗಿತ್ತು. ವ್ಯಕ್ತಿ ಸಾವಿನ ನಂತರ ಹೇಗೆ ಅವರ ಕಣ್ಣುಗಳನ್ನು ಹಾಳು ಮಾಡಲಾಗುತ್ತದೆ ಎಂಬುದನ್ನು ಪರಿಣಾಮಕಾರಿಯಾಗಿ ತೋರಿಸಲಾಯಿತು. ಪ್ರತಿಯೊಬ್ಬ ವ್ಯಕ್ತಿಗೂ ನೇತ್ರದಾನದ ಮಹತ್ವ ತಿಳಿದರೆ ದೇಶದಲ್ಲಿ ಕಾರ್ನಿಯಾ ಅಂಧತ್ವವೇ ಇರುವುದಿಲ್ಲ ಎನ್ನುವುದು ಜನರಿಗೆ ಮನ ಮುಟ್ಟುವಂತೆ ಮಾಡುವುದೇ ಜಾಥಾ ಉದ್ದೇಶವಾಗಿತ್ತು.

**▪ ಡಾ. ಲಾವಣ್ಯ ರಮಣ**

■ ವಿಶೇಷ ಲೇಖನ

# ಜ್ಞಾನ, ಬದ್ಧತೆ ಮತ್ತು ಮಾನವೀಯತೆಯ ತ್ರಿವೇಣಿ ಸಂಗಮ

# ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ



ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ 2020ರ ಫೆಬ್ರುವರಿಯಲ್ಲಿ ಶ್ರೀ ದುರ್ಗಾಂಬಿಕಾದೇವಿಯ ಪ್ರತಿಷ್ಠಾಪನೆ ಮಾಡಿದರು. ಅದರ ಸವಿನೆನಪಿಗಾಗಿ ಲೌಕಿಕ ಮತ್ತು ಅಧ್ಯಾತ್ಮ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಾನ್ ಜೀವಿಗಳನ್ನು ಗುರುತಿಸಿ ಅವರಿಗೆ 'ಶ್ರೀದೇವಿ ರಮಣ ಮಹರ್ಷಿ ಪುರಸ್ಕಾರ' ನೀಡುವ ಸಂಪ್ರದಾಯವನ್ನು ಪ್ರಾರಂಭಿಸಿದರು. 2023ರ ಸಾಲಿನ ಶ್ರೀದೇವಿ ರಮಣಮಹರ್ಷಿ ಪುರಸ್ಕಾರವನ್ನು ನ್ಯಾಯಮೂರ್ತಿ ಶ್ರೀ ಎಂ.ಎನ್. ವೆಂಕಟಾಚಲಯ್ಯ ಅವರಿಗೆ ನೀಡುವ ಸಂಕಲ್ಪ ಮಾಡಿದ್ದಾರೆ.

ತೊಂಬತ್ತನಾಲ್ಕರ ಹರೆಯದ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರು ದಿನಾಂಕ.25.10.1929ರಲ್ಲಿ ಪ್ರೊ. ಎಂ.ನಾರಾಯಣರಾವ್ ಮತ್ತು ಶ್ರೀಮತಿ ಸರಸ್ವತಮ್ಮ ದಂಪತಿಗಳಿಗೆ ಹಿರಿಯ ಪುತ್ರರಾಗಿ ಜನಿಸುತ್ತಾರೆ. ಪ್ರೊ.ಎಂ.ನಾರಾಯಣರಾವ್ ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನ ಸ್ಥಾಪಕ ಪ್ರಾಂಶುಪಾಲರು.

ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದ ಮೇಲೆ ಮದ್ರಾಸ್ ಕಾನೂನು ಕಾಲೇಜಿನಿಂದ ಬಿ.ಎಲ್. ಪದವಿ ಪಡೆಯುತ್ತಾರೆ. ತುಂಬ ಪ್ರತಿಭಾವಂತ ವಿದ್ಯಾರ್ಥಿಯಾದ ಅವರನ್ನು ಅಂದಿನ ಉಪರಾಷ್ಟ್ರಪತಿ ಡಾ.ಎಸ್.ರಾಧಾಕೃಷ್ಣನ್ ಅವರು ಸಹ ತಮ್ಮಲ್ಲಿ ಕೆಲಸ ಮಾಡುವಂತೆ ಆಹ್ವಾನಿಸುತ್ತಾರೆ.

1952ರಲ್ಲಿ ಸ್ವತಂತ್ರವಾಗಿ ವಕೀಲವೃತ್ತಿ ಆರಂಭಿಸಿದ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರು ಬಹುಬೇಗನೆ ತಮ್ಮ ಪ್ರತಿಭೆಯಿಂದಾಗಿ ಎಲ್ಲರ ಗಮನ ಸೆಳೆಯುತ್ತಾರೆ. ದಿನಾಂಕ 6.11.1975ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಳ್ಳುತ್ತಾರೆ. ದಿನಾಂಕ 15.10.1987ರಲ್ಲಿ ಸುಪ್ರೀಂ ಕೋರ್ಟ್‌ಗೆ ನ್ಯಾಯಾಧೀಶರಾಗಿ ಬಡ್ತಿ ದೊರೆಯುತ್ತದೆ. ದಿನಾಂಕ 12.2.1993ರಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಾಧೀಶರಾಗಿ ನೇಮಕವಾಗುತ್ತಾರೆ.ದಿನಾಂಕ 20.11.1996ರಲ್ಲಿ 'ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ' ನೇಮಕವಾಗುತ್ತಾರೆ.

ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರ ತಮ್ಮ ಜ್ಞಾನ ಮತ್ತು ಬದ್ಧತೆಗಳಿಂದಾಗಿ ಭಾರತದ ನ್ಯಾಯಾಂಗ ಕ್ಷೇತ್ರದ ಪಿತಾಮಹ ಎಂದೇ ಪ್ರಸಿದ್ಧಿಯಾಗಿದ್ದಾರೆ.

ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರು ಮೂಲತಃ ಅಧ್ಯಾತ್ಮಜೀವಿ. ಕೊಲ್ಲೂರಿನ ಮೂಕಾಂಬಿಕಾದೇವಿಯ ಆಲಯವನ್ನು ಶಾಸ್ತ್ರಬದ್ಧವಾಗಿ ನವೀಕರಣ ಮಾಡಿದ ಖ್ಯಾತಿ ಅವರದು. ಪುಟ್ಟಪರ್ತಿ ಶ್ರೀ ಸತ್ಯಸಾಯಿಬಾಬಾ ಅವರ 'ಶ್ರೀ ಸತ್ಯಸಾಯಿ ಇನ್‌ಸಿಟ್ಯೂಟ್ ಆಫ್ ಹೈಯರ್ ಲರ್ನಿಂಗ್' ಡೀಮ್ಡ್ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿ ಕೆಲಸ ಮಾಡಿದ್ದಾರೆ.

ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರ ಸೇವೆಯನ್ನು ಗುರುತಿಸಿ ಭಾರತ ಸರ್ಕಾರ ಪದ್ಮವಿಭೂಷಣ ಪ್ರಶಸ್ತಿಯನ್ನು ನೀಡಿದೆ. ಕರ್ನಾಟಕ ಸರ್ಕಾರ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿದೆ.

ಲೌಕಿಕ ಮತ್ತು ಪಾರಮಾರ್ಥಿಕಗಳೆರಡರಲ್ಲೂ ಸಮನ್ವಯತೆ ಸಾಧಿಸಿರುವುದು ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರ ಬದುಕಿನ ವೈಶಿಷ್ಟ್ಯವಾಗಿದೆ.

### ಡಾ.ಎಂ.ಆರ್.ಹುಲಿನಾಯ್ಕರ್ ಅವರು ದೃಷ್ಟಿಯಲ್ಲಿ ಎಂಎನ್‌ವಿ

ನಾವು ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಶ್ರೀ ದುರ್ಗಾಂಬಿಕಾದೇವಿಯ ಆಲಯವನ್ನು ನಿರ್ಮಾಣ ಮಾಡಲು ಸಂಕಲ್ಪಿಸಿದ ಮೇಲೆ ನಮಗೆ ಮಾರ್ಗದರ್ಶನ ನೀಡಲು ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರನ್ನು ಪ್ರಾರ್ಥಿಸಬಹುದು ಎಂದು ಮಿತ್ರರು ಸಲಹೆ ಕೊಟ್ಟರು. ನನಗೆ ವೈಯಕ್ತಿಕವಾಗಿ ನ್ಯಾಯಮೂರ್ತಿಗಳ ಪರಿಚಯ ಅಷ್ಟೇನೂ ಇರಲಿಲ್ಲ. ಮತ್ತೊಂದು ಅರ್ಥದಲ್ಲಿ ಅವರನ್ನು ಕಾಣಲು ಉಭಯಕುಶಲೋಪರಿಯ ಪರಿಚಯ ಅನಗತ್ಯ. ಹಿಮಾಲಯದ ಭವ್ಯತೆಯನ್ನು ಯಾರು ತಾನೇ ಕೇಳಿರುವುದಿಲ್ಲ. ಆ ಧೈರ್ಯದ ಮೇಲೆ ಬೆಂಗಳೂರಿನ ಬಸವನಗುಡಿಯಲ್ಲಿರುವ ಅವರ ಮನೆಗೆ ಹೋದೆವು. 'ನಾವು ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಶ್ರೀ ದುರ್ಗಾಂಬಿಕಾದೇವಿಯನ್ನು ಪ್ರತಿಷ್ಠಾಪನೆ ಮಾಡಲು ಸಂಕಲ್ಪ ಮಾಡಿದ್ದೇವೆ, ಆಕೆ ಅಲ್ಲಿ ನೆಲಸಲು ಆಶೀರ್ವಾದ ಮಾಡಿ' ಎಂದು ನ್ಯಾಯಮೂರ್ತಿ ಅವರನ್ನು ಪ್ರಾರ್ಥಿಸಿದೆವು. ಏನಾಶ್ಚರ್ಯ! ಮರುಮಾತಿಲ್ಲದೆ ಒಪ್ಪಿಕೊಂಡು ಆಲಯದ ನಿರ್ಮಾಣ ಸಮಿತಿಯ ಗೌರವಾಧ್ಯಕ್ಷರಾಗಿರಲು ಸಮ್ಮತಿಸಿದರು. ಸುಮಾರು ಹೊತ್ತ ದೇವಿಯ ಆಲಯದ ಮಹತ್ವವನ್ನು ತಿಳಿಸುವ ಗ್ರಂಥಗಳ ವಿಚಾರವನ್ನು ಹೇಳಿದರು. ದೇವಿಯ ಆಲಯದ ವಾಸ್ತುಶಿಲ್ಪ ಯಾವ ರೀತಿ ಇರಬೇಕು, ಇದಕ್ಕೆ ಶಾಸ್ತ್ರಾಧಾರಗಳು ಏನು ಹೇಳುತ್ತವೆ–ಒಂದೇ ಎರಡೇ. ಅವರ ಜೊತೆ ಕಳೆದ ಆ ಕ್ಷಣ ನಮ್ಮಲ್ಲಿ ಶ್ರೀ ದುರ್ಗಾಂಬಿಕಾದೇವಿಯ ಬಗ್ಗೆ ಮತ್ತಷ್ಟು ಶ್ರದ್ಧೆ ಮತ್ತು ಭಕ್ತಿಗಳು ಮೂಡಿದವು.



ಶ್ರೀದೇವಿ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ಶ್ರೀದುರ್ಗಾಂಬಿಕಾದೇವಿ ಆಲಯ ನಿರ್ಮಾಣದ ಸಂಕಲ್ಪ. ಅದರ ಅಂಗವಾಗಿ ಏರ್ಪಡಿಸಿದ್ದ ಶ್ರೀ ವಿಷ್ಣುಸಹಸ್ರನಾಮ ಪಠಣದ ಕಾರ್ಯಕ್ರಮದ ಉದ್ಘಾಟನೆ. ಡಾ.ಹುಲಿನಾಯ್ಕರ್, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಎಂ.ಎನ್. ವೆಂಕಟಾಚಲಯ್ಯ, ನಿವೃತ್ತ ಮುಖ್ಯ ನ್ಯಾಯಾಧೀಶರು, ಭಾರತದ ಸರ್ವೋಚ್ಚ ನ್ಯಾಯಾಲಯ, ಶ್ರೀಮತಿ ಅಂಬಿಕಾ ಪಾಟೀಲ್, ಹಿರಿಯ ವಿದ್ವಾಂಸರಾದ ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ, ಶ್ರೀಮತಿ ಶಾಂತಾದುರ್ಗಾದೇವಿ, ಎಂ.ಎಸ್.ಪಾಟೀಲ್, ಕ್ಯಾಂಪಸ್‌ನಲ್ಲಿದ್ದ ದೇವಿಯ ಅರ್ಚಕರಾದ ನಾಗಭೂಷಣ ಶರ್ಮ

### ನಂಬಲು ಸಾಧ್ಯವಿಲ್ಲ

ನಾವು ಶ್ರೀದೇವಿ ಮೀಡಿಯಾ ಸೆಂಟರ್‌ನಿಂದ ಶಿಕ್ಷಣ, ಸೇವೆ ಮತ್ತು ಅಧ್ಯಾತ್ಮತತ್ವಗಳ ಪ್ರಸಾರಕ್ಕಾಗಿ 'ಶ್ರೀದೇವಿ ಅಂತರಂಗ' ಎಂಬ ಮಾಸಪತ್ರಿಕೆಯನ್ನು ಹೊರತರುತ್ತಿದ್ದೇವೆ. ಅದರ ಸಂಚಿಕೆವೊಂದರಲ್ಲಿ ಮಡದಿ ದುರ್ಗಾ ಅವರು ತಾವು ಐದು ವರ್ಷ ಆಚರಿಸಿದ್ದ 'ಸ್ವರ್ಣಗೌರಿ ವ್ರತ' ಮತ್ತು ಅದಕ್ಕೆ ದೀಕ್ಷೆ ಕೊಟ್ಟ ನವಲಗುಂದದ ಅಧ್ಯಾತ್ಮಪುರುಷರಾಗಿದ್ದ ಪೂಜ್ಯ ಶ್ರೀ ಹುರಕಡ್ಲಿ ಅಜ್ಜ ಅವರ ಬಗ್ಗೆ ಹೇಳಿದ್ದರು. ಅದನ್ನು ಲೇಖಕಿ ಶ್ರೀಮತಿ ಎನ್.ಭಾರತಿ ಅವರು ನಿರೂಪಣೆ ಮಾಡಿದ್ದರು. ಒಮ್ಮೆ ಎಂದಿನಂತೆ ನ್ಯಾಯಮೂರ್ತಿಗಳ ಮನೆಗೆ ಹೋದಾಗ 'ಡಾಕ್ಟ್ರೇ ನಿಮ್ಮ ಮಡದಿ ಅವರ ಲೇಖನ ಓದಿದೆ. ಹುರಕಡ್ಲಿ ಅಜ್ಜ ಅವರ ಬಗ್ಗೆ ಚೆನ್ನಾಗಿ ಹೇಳಿದ್ದಾರೆ' ಎಂದರು. ಅವರ ಮಾತು ಕೇಳಿ ನಾನು ಮೂಕವಿಸ್ಮಿತನಾದೆ. ಅವರ ಮನೆಗೆ ಪ್ರತಿದಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪತ್ರಿಕೆಗಳು ಎಷ್ಟು ಬರಬಹುದು. ಎಷ್ಟೋ ಲೇಖಕರು ತಮ್ಮ ಬರಹವನ್ನು ಅವರಿಗೆ ಕೊಟ್ಟು 'ಓದಿ ಅಭಿಪ್ರಾಯ ಹೇಳಿ ಸಾರ್' ಎಂದು ಪ್ರಾರ್ಥಿಸಿರಬಹುದು. ಅವರಿಗೆ ಸಹಜವಾಗಿ



ಭಾರತ ಸರ್ಕಾರದ ನೀಡಿದ ಪದ್ಮವಿಭೂಷಣ ನಾಗರಿಕ ಪ್ರಶಸ್ತಿಯನ್ನು ರಾಷ್ಟ್ರಪತಿ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರು ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರಿಗೆ ಪ್ರದಾನ ಮಾಡುತ್ತಿರುವುದು

ಶೈಕ್ಷಣಿಕ ಮಹತ್ವವಿರುವ ಪತ್ರಿಕೆಗಳೇ ಬರುತ್ತವೆ. ಅಂತಹುದರಲ್ಲಿ 'ಶ್ರೀದೇವಿ ಅಂತರಂಗ' ಪತ್ರಿಕೆಯನ್ನು ಓದಿ ಎಷ್ಟೋ ದಿನಗಳ ನಂತರ ನಮ್ಮನ್ನು ನೋಡಿದ ತಕ್ಷಣ ಓದಿರುವುದನ್ನು ಜ್ಞಾಪಿಸಿಕೊಂಡು ನಮಗೆ ಹೇಳುವ ಅವರ ಸಹೃದಯತೆ ಎಂತಹುದು ಎಂಬುದನ್ನು ನೀವೇ ಯೋಚಿಸಿ. ಇಲ್ಲಿ ಮಾನವೀಯತೆ ಮತ್ತು ಪ್ರೀತಿ ಕೆಲಸ ಮಾಡುತ್ತದೆ. ಅಲ್ಲಿರುವುದು ಹೃದಯದ ಭಾಷೆ. ಅದಕ್ಕಾಗಿ ನ್ಯಾಯಮೂರ್ತಿಗಳು ಬಹಳ ಜನರಿಗೆ ಬೇಕಾದವರಾಗಿರುತ್ತಾರೆ.

### ಡಾ.ಕೆ.ಆರ್.ಕಮಲೇಶ್ ಅವರ ಗ್ರಂಥದಿಂದ

ಇಂಗ್ಲೆಂಡ್‌ನಲ್ಲಿ ಭಾರತದ ಹೈಕಮಿಷನರ್ ಆಗಿದ್ದ ಡಾ.ಎಲ್.ಎಂ.ಸಿಂಘ್ವಿ ಅವರು ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರನ್ನು ಕುರಿತು ಹೇಳಿರುವ ಮಾತುಗಳು ದಾಖಲಾರ್ಹವಾಗಿದೆ. ಶ್ರೀಯುತರು ನ್ಯಾಯಮೂರ್ತಿಗಳಿಗೆ ಕಾಶಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ 'ಡಿ.ಎಮ್.ಸಿಂಘ್ವಿ ಪ್ರಶಸ್ತಿ



ಸುಂದರ ಪರಿಸರದಲ್ಲಿ ವೆಂಕಟಾಚಲಯ್ಯ ದಂಪತಿಗಳು

ಪ್ರದಾನ' ಸಮಾರಂಭದಲ್ಲಿ ಆಡಿದ ಮಾತುಗಳಿವು. "ಇಂಗ್ಲೆಂಡ್ ನ್ಯಾಯಾಂಗ ಪರಂಪರೆಯಲ್ಲಿ ಲಾರ್ಡ್ Bingham ಮತ್ತು ಮುಖ್ಯ ನ್ಯಾಯಾಧೀಶರಾಗಿದ್ದ ವೇಟ್ಸ್ ತಮ್ಮ ಕಾಲದ ನ್ಯಾಯಾಂಗ ಪರಂಪರೆಯಲ್ಲಿ ಅತ್ಯುನ್ನತ ಸ್ಥಾನದಲ್ಲಿರುವವರು ಎಂದು ಪರಿಗಣಿತರಾಗಿದ್ದಾರೆ. ಭಾರತದ ನ್ಯಾಯಾಂಗ ಪರಂಪರೆಯನ್ನು ಈ ದೃಷ್ಟಿಯಿಂದ ನೋಡಿದಾಗ ನ್ಯಾಯಮೂರ್ತಿ ಎಂ.ಎನ್, ವೆಂಕಟಾಚಲಯ್ಯ ಅವರು ಅತ್ಯುನ್ನತ ಸ್ಥಾನದಲ್ಲಿರುವವರು ಎಂದು ಧಾರಾಳವಾಗಿ ಹೇಳಬಹುದು".

### ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ಸಾಮಾಜಿಕ ಕಾಳಜಿ

ಕೇಂದ್ರ ಮತ್ತು ರಾಜ್ಯಸರ್ಕಾರ ಜನರ ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು ಎನ್ನುತ್ತಾರೆ ನ್ಯಾಯಮೂರ್ತಿ ವೆಂಕಟಾಚಲಯ ಅವರು. "ಹೃದಯಾಘಾತ, ಕ್ಯಾನ್ಸರ್ ಮತ್ತು ಮೂತ್ರಪಿಂಡದ ಸಮಸ್ಯೆಯಿಂದ ಬಳಲುವ ರೋಗಿಗಳ ಆರ್ಥಿಕಸ್ಥಿತಿ ಗಮನಿಸದೇ ಅತ್ಯುತ್ತಮ ಚಿಕಿತ್ಸೆಯನ್ನು ಉಚಿತವಾಗಿ ಕೊಡಿ. ಮೂತ್ರಪಿಂಡದ ಸಮಸ್ಯೆಯಿರುವ ರೋಗಿ ಪ್ರತಿಸಲ

ಡಯಾಲಿಲೀಸಿಸ್ ಮಾಡಿಸಲು ಐದು ಸಾವಿರ ಕೊಡಬೇಕು. ತಿಂಗಳಿಗೆ ಇಪ್ಪತ್ತೈದು ಸಾವಿರ ರೂ.ಗಳನ್ನು ಡಯಾಲಿಲೀಸ್‌ಗೆ ವೆಚ್ಚ ಮಾಡಲು ಯಾವ ಕುಟುಂಬಕ್ಕೆ ಆರ್ಥಿಕ ಚೈತನ್ಯವಿರುತ್ತದೆ. ಅದೇ ಕ್ಯಾನ್ಸರ್ ಮತ್ತು ತೆರೆದ ಹೃದಯದ ಶಸ್ತ್ರಚಿಕಿತ್ಸೆಗೆ ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡುವ ಸನ್ನಿವೇಶವಿದೆ. ನಾಗರಿಕ ಸರ್ಕಾರಗಳು ಇಂತಹ ಭೀಕರ ಕಾಯಿಲೆಗಳನ್ನು ತುರ್ತು ಚಿಕಿತ್ಸೆಯೆಂದೇ ಭಾವಿಸಿ ದೇಶದ ಜನರ ರಕ್ಷಣೆಗೆ ಬರಬೇಕು" ಎನ್ನುವ ಕಳಕಳಿ ಅವರಲ್ಲಿದೆ.

**ನೈಜವಾದ ಅಧ್ಯಾತ್ಮಜೀವಿ**

ನ್ಯಾಯಮೂರ್ತಿ ಎಂ.ಎನ್,ವೆಂಕಟಾಚಲಯ್ಯ ಅವರು ಬಾಯಿಂದ ಅಧ್ಯಾತ್ಮವನ್ನು ಬೋಧಿಸಿದವರಲ್ಲ. ಅದನ್ನು ನಡೆದು ತೋರಿಸಿದ್ದಾರೆ. ಅವರಿಗೆ ಹಣ ಮಾಡುವ ಕ್ರೇಜ್ ಇಲ್ಲ. ಅವರಲ್ಲಿರುವ ಈ ಸಂತೃಪ್ತಿಗೆ ಮುಖ್ಯಕಾರಣ ಅವರ ಅಧ್ಯಾತ್ಮಪ್ರಜ್ಞೆ. ನಿವೃತ್ತರಾದ ನಂತರ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಾಧೀಶರು Arbitration ಅಥವಾ ಉದ್ಯಮಿಗಳಿಗೆ ಲೀಗಲ್ ಒಪಿನಿಯನ್ ನೀಡಿ ಕೋಟ್ಯಂತರ ರೂ.ಗಳನ್ನು ಸಂಪಾದನೆ ಮಾಡಿದ ಅಥವಾ ಮಾಡುತ್ತಿರುವ ಅನೇಕ ಸನ್ನಿವೇಶಗಳಿವೆ. ಅವರು ಸರ್ವೋಚ್ಚ ನ್ಯಾಯಾಲಯದ ಹುದ್ದೆಯಿಂದ ನಿವೃತ್ತರಾದ ಮೇಲೆ ಯಾವುದೇ ಲಾಭದಾಯಕ ಹುದ್ದೆಗಳನ್ನು ಒಪ್ಪಿಕೊಂಡಿಲ್ಲ. ತಮ್ಮ ಕಾನೂನು ಪಾಂಡಿತ್ಯವನ್ನು ನಗದು ಮಾಡಿಕೊಂಡಿಲ್ಲ. ಅಂದಾಕ್ಷಣ ಯಾರಿಗೂ ಸಲಹೆ ಕೊಡುವುದಿಲ್ಲ ಎಂದಲ್ಲ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಅತ್ಯುತ್ತಮ ಸಲಹೆ ಹಾಗೂ ಮಾಗದರ್ಶನ ನೀಡುತ್ತಾರೆ. ಅನೇಕ ಸಂಸ್ಥೆ ಮತ್ತು ವ್ಯಕ್ತಿಗಳು ಅದನ್ನು ಪಡೆದುಕೊಳ್ಳುತ್ತಿದ್ದಾರೆ. ಇಂತಹ ನಿರ್ಲಿಪ್ತ ಮನೋಧರ್ಮ ಅವರಿಗೆ ವಕೀಲವೃತ್ತಿಗೆ ಬಂದ ದಿನದಿಂದಲೂ ಬಂದಿದೆ.



ಮುಖ್ಯ ನ್ಯಾಯಾಧೀಶರಾಗಿ ವೆಂಕಟಾಚಲಯ್ಯ ಅವರ ಪ್ರಮಾಣವಚನ ಸ್ವೀಕಾರದ ನಂತರ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿದ್ದ ಲಲಿತಾ ಮೋಹನಶರ್ಮ, ಪ್ರಧಾನಿ ಪಿ.ವಿ.ನರಸಿಂಹರಾವ್, ರಾಷ್ಟ್ರಪತಿ ಡಾ.ಶಂಕರ ದಯಾಳ್ ಶರ್ಮ ದಂಪತಿಗಳು

**ಅಸಾಧಾರಣ ಸಾಮರ್ಥ್ಯ**

ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ಅಸಾಧಾರಣ ಜ್ಞಾಪಕಶಕ್ತಿ ಅವರಿಗೆ ದೈವದತ್ತವಾಗಿ ಬಂದ ಗುಣವಾಗಿದೆ. ಯಾವುದೇ ಗ್ರಂಥವನ್ನು ಅವರು ಅಧ್ಯಯನ ಮಾಡಿದರೆ ಅದರಲ್ಲಿನ ಪುಟಗಳು ಛಾಯಾಚಿತ್ರದ ತರಹ ಅವರ ಮಿದುಳಿನಲ್ಲಿ ಉಳಿದುಬಿಡುತ್ತದೆ. ಬೇಕಾದಾಗ ಅದನ್ನು ಬಳಸುತ್ತಾರೆ. ಗ್ರಂಥದ ಶೀರ್ಷಿಕೆ, ಲೇಖಕರು, ಪ್ರಕಾಶಕರು, ಪುಟದ ಸಂಖ್ಯೆ, ಅದರಲ್ಲಿ ಚಿತ್ರಗಳು, ಶಬ್ದದ ಅರ್ಥ, ಸ್ಪೆಲ್ಲಿಂಗ್ ಹೀಗೆ ಅನೇಕ ಸೂಕ್ಷ್ಮ ವಿಚಾರಗಳನ್ನು ಹೇಳುವುದು ಅಷ್ಟು ಸುಲಭವವಲ್ಲ. ಅವರು ವೃತ್ತಿಯಲ್ಲಿ ಯಶಸ್ವಿಯಾಗಲು ಈ ಗುಣ ಅವರಿಗೆ ಸಹಾಯ ಮಾಡಿರಬಹುದು.

**ದೇಶದ ನ್ಯಾಯಾಂಗ ಕ್ಷೇತ್ರಕ್ಕೆ ಮಾರ್ಗ ತೋರಿಸಿದವರು**

ಪ್ರಧಾನಿ ಪಿ.ವಿ.ನರಸಿಂಹರಾವ್ ಅವರ ಕಾಲದಲ್ಲಿ ಭಾರತದ ಮುಖ್ಯ ನ್ಯಾಯಾಧೀಶರಾಗಿ ಎಂ.ಎನ್,ವೆಂಕಟಾಚಲಯ್ಯ ಅವರು ಅಧಿಕಾರ ಸ್ವೀಕಾರ ಮಾಡುತ್ತಾರೆ. ಆಗ ಪ್ರಧಾನಮಂತ್ರಿಗಳು ಮಾತನಾಡುತ್ತಾ 'ಕಾರ್ಯಾಂಗ ಮತ್ತು ನ್ಯಾಯಾಂಗದ ಸಂಬಂಧ ಸುಮಧುರವಾಗಿರಬೇಕು ಎನ್ನುವ ಮಾತನ್ನು ಆಡುತ್ತಾರೆ. ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರು ಅದಕ್ಕೆ ತಕ್ಷಣ ಪ್ರತಿಕ್ರಿಯೆ ನೀಡುತ್ತಾರೆ. "ಭಾರತದ ಪ್ರಜಾಪ್ರಭುತ್ವದ ದೃಷ್ಟಿಯಿಂದ ನ್ಯಾಯಾಂಗ ಎಂದು ಕಾರ್ಯಾಂಗದ ಜೊತೆ ಸುಮಧುರ ಬಾಂಧವ್ಯವಿಟ್ಟುಕೊಳ್ಳಬಾರದು. ಅಲ್ಲಿ ಸಂಘರ್ಷಕ್ಕೂ ಅವಕಾಶವಿರುವುದಿಲ್ಲ. ವಿಷಯಾಧಾರಿತವಾಗಿ ಉತ್ತಮ ಬಾಂಧವ್ಯವಿಟ್ಟುಕೊಂಡರೆ ಒಳ್ಳೆಯದು. ನ್ಯಾಯಾಂಗ ಸದಾ ಜನರ ಹಿತವನ್ನು ಗಮನದಲ್ಲಿಟ್ಟುಕೊಂಡು ಸಂವಿಧಾನಕ್ಕೆ ಬದ್ಧವಾಗಿ ಕೆಲಸ ಮಾಡಬೇಕು."

**ವ್ಯಕ್ತಿ ಹಿರಿಮೆ**

ಲಂಡನ್‌ನ ಮುಖ್ಯ ನ್ಯಾಯಾಧೀಶರಾಗಿದ್ದ ಲಾರ್ಡ್ Bingnam ಅವರು "ಭಾರತದ ಪ್ರಸ್ತುತ ನ್ಯಾಯಾಂಗ ಕ್ಷೇತ್ರದಲ್ಲಿ ಅತ್ಯಂತ ಮೇಧಾವಿ ನ್ಯಾಯಾಧೀಶರೆಂದರೆ ಶ್ರೀ ಎಂ.ಎನ್. ವೆಂಕಟಾಚಲಯ್ಯ ಅವರು ಮಾತ್ರ" ಎನ್ನುತ್ತಾರೆ.

ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್ ಅವರ ಪ್ರಕಾರ "ಎಂ.ಎನ್.ವೆಂಕಟಾಚಲಯ್ಯ ಅವರು ಮಹಾನ್ ಜ್ಞಾನಿಗಳು. ಅಧ್ಯಯನ ಅವರ ದಿನನಿತ್ಯದ ಕಾರ್ಯ. ಸಾಮಾನ್ಯವಾಗಿ ನ್ಯಾಯಾಧೀಶರು ಕೊಡುವ ತೀರ್ಪುಗಳು ಸಮಕಾಲೀನ ಜಗತ್ತಿನ ಗಣನೆಗೆ ಬಾರದೇ ಹೋಗಬಹುದು. ಕಾಲಾನಂತರ ಅದೇ ತೀರ್ಪು ಜನರ ಸಾಮಾಜಿಕ ಇತಿಹಾಸದಲ್ಲಿ ಮಾರ್ಗದರ್ಶಕ ಸೂತ್ರಗಳಾಗಬಹುದು. ಅಂತಹ ತೀರ್ಪುಗಳನ್ನು ನೀಡಿದ ಕೀರ್ತಿ ಎಂ.ಎನ್.ವೆಂಕಟಾಚಲಯ್ಯ ಅವರಿಗೆ ಸೇರುತ್ತದೆ."

ಖ್ಯಾತ ವಕೀಲರಾದ ಪಾಲ್ಕಿವಾಲ ಅವರು "ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಅವರು ತಮ್ಮ ಅಮೋಘ ಪಾಂಡಿತ್ಯ ಮತ್ತು ವಿಶ್ವಮಾನವೀಯ ಗುಣಗಳಿಂದಾಗಿ ದಂತಕತೆಯಂತಿದ್ದಾರೆ" ಎಂದು ಅಭಿಪ್ರಾಯಪಡುತ್ತಾರೆ.

## ಡಾ.ಎಂ.ವೀರಪ್ಪ ಮೊಯಿಲಿ ಅವರು ನ್ಯಾಯಮೂರ್ತಿಗಳನ್ನು ಕಂಡಂತೆ

ತೊಂಬತ್ತು ನಾಲ್ಕುವರ್ಷವಾಗಿದ್ದರೂ ಶ್ರೀಯುತರು ಇಂದು ಕೂಡ ಸಮುದಾಯ ಪ್ರಜ್ಞೆಯೊಡನೆ ನ್ಯಾಯಾಂಗದ ವಿವಿಧ ವಿಚಾರಗಳಲ್ಲಿ ಅಧಿಕಾರವಾಣಿಯಿಂದ ಮಾತನಾಡಬಲ್ಲ ಏಕೈಕ ಜ್ಞಾನಿಗಳವರು. ಸಂವಿಧಾನದ ಮೂಲ ಆಶಯಗಳನ್ನು ಅತ್ಯಂತ ಅಧಿಕೃತವಾಗಿ ಹೇಳಬಲ್ಲ ಇಂದು ಮತ್ತು ಮುಂದು ಕೂಡ ಮಾರ್ಗದರ್ಶನ ನೀಡಬಲ್ಲ ಓರ್ವ ನ್ಯಾಯವೇತ್ತರು ಅಂದರೆ ನ್ಯಾಯಮೂರ್ತಿ ವೆಂಕಟಾಚಲಯ್ಯನವರು.

ಜ್ಞಾನದ ವಿಸ್ತಾರದಲ್ಲಿ ಔನ್ನತ್ಯವೇರಿದ ಅವರ ಸಜ್ಜನಿಕೆ ಮತ್ತು ಸಮಾಜದಲ್ಲಿ ಕೆಳಸ್ತರದಿಂದ ಮೇಲ್‌ಸ್ತರದ ವ್ಯಕ್ತಿಗಳ ಜೊತೆಯಲ್ಲಿಟ್ಟುಕೊಂಡ ಒಡನಾಟ, ಎಲ್ಲರಲ್ಲಿಯೂ ಪ್ರೀತಿ, ವಿಶ್ವಾಸವನ್ನು ಸಮನಾಗಿ ಹಂಚಿಕೊಳ್ಳುವ ಶ್ರೇಷ್ಠ ವ್ಯಕ್ತಿಯಾಗಿ ವೆಂಕಟಾಚಲಯ್ಯನವರ ನಡೆ ಅನುಕರಣೀಯ. ನ್ಯಾಯ ಮತ್ತು ವಿಜ್ಞಾನದಲ್ಲಿ ಅತ್ಯಂತ ಉತ್ತುಂಗಕ್ಕೆ ಏರಿರುವ ವೆಂಕಟಾಚಲಯ್ಯನವರ ತಳಸ್ಪರ್ಶಿ ಚಿಂತನೆಗಳು ವಿಸ್ಮಯಕಾರಿಯಾಗಿದೆ.

ನಾನು ಅರವತ್ತರ ದಶಕದಲ್ಲಿ ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನ ವಿದ್ಯಾರ್ಥಿ. ಆಗೆಲ್ಲಾ ನಮ್ಮ ಉಪನ್ಯಾಸಕರು ಯಶಸ್ವಿ ವಕೀಲರಾಗಲು ವೃತ್ತಿ ನಿರತ ವಕೀಲರು ನ್ಯಾಯಾಲಯಗಳಲ್ಲಿ ಹೇಗೆ ತಮ್ಮ ವಾದವನ್ನು ಮಂಡಿಸುತ್ತಾರೆ, ಅವರ ಭಾಷೆ, ಅಭಿವ್ಯಕ್ತಿ ಮತ್ತು ಅಧ್ಯಯನದ ವ್ಯಾಪಿಯನ್ನು ನೀವುಗಳು ನೋಡುವುದು ಅಗತ್ಯವೆಂದು ಹೇಳುತ್ತಿದ್ದರು. ಅದರಂತೆ ನಾನು ಬೆಂಗಳೂರಿನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಓದುತ್ತಿರುವಾಗ ನಾವು ಅನೇಕ ವಿದ್ಯಾರ್ಥಿಗಳು ನ್ಯಾಯಮೂರ್ತಿ ವೆಂಕಟಾಚಲಯ್ಯನವರ ಕೋರ್ಟ್‌ಗೆ ಹೋಗಿ ಅವರು ನಿರ್ವಹಿಸುತ್ತಿದ್ದ ರೀತಿ, ನೀತಿ, ಮಾತು, ಅವರ ವಾಗ್ಝರಿಯನ್ನು ಅತ್ಯಂತ ಕುತೂಹಲದಿಂದ ಮತ್ತು ಆಸಕ್ತಿಯಿಂದ ಆಲಿಸುತ್ತಿದ್ದೆವು. ಈ ರೀತಿ ಅನೇಕ ಬಾರಿ ವಿದ್ಯಾರ್ಥಿಗಳೆಲ್ಲರೂ ಅವರು ನಿರ್ವಹಿಸುತ್ತಿದ್ದ ವಿಧಾನವನ್ನು ಕಂಡು ತಲೆ ಬಾಗುತ್ತಿದ್ದೆವು. ಇದು ನನ್ನ ವಕೀಲಿ ವೃತ್ತಿ ಜೀವನಕ್ಕೆ ಸಹಕಾರಿಯಾಗಿದೆ.

ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರು ಕಾರ್ಯಾಂಗ ಮತ್ತು ನ್ಯಾಯಾಂಗದ ನಡುವೆ ಸುಮಧುರ ಬಾಂಧವ್ಯವಿರಬೇಕು ಎಂಬ ಆಶಯ ಹೊಂದಿದ್ದರು. ಅದರಂತೆ ಅವರು ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದಾಗ ಕೇಂದ್ರಕ್ಕೆ ಅನೇಕ ರೀತಿಯಲ್ಲಿ ಮಾರ್ಗದರ್ಶನ ನೀಡಿದ್ದಾರೆ.

ಶ್ರೀ ವೆಂಕಟಾಚಲಯ್ಯನವರ ಭಾಷಾ ಪ್ರೌಢಿಮೆ ಅಸಾಧಾರಣ. ಇಂದಿನ ಕೋರ್ಟ್‌ಗಳಲ್ಲಿ ಪರ್ವತದಂತೆ ಬಾಕಿ ಕೇಸುಗಳು ಏರುತ್ತಿರುವ ಕ್ಲಪ್ತ ಕಾಲಕ್ಕೆ ನ್ಯಾಯ ತಲುಪಿಸುವ ಕಲೆಯನ್ನು ಶ್ರೀ ವೆಂಕಟಾಚಲಯ್ಯನವರು ಕರಗತ ಮಾಡಿಕೊಂಡಿದ್ದರು. ಅವರು ನ್ಯಾಯಾಂಗ ಕ್ಷೇತ್ರದಲ್ಲಿ ಮಾಡಿದ ಅನೇಕ ಸಂಗತಿಗಳು ದಾಖಲೆಗೆ ಅರ್ಹವಾಗಿದೆ. ಸುಮಾರು ಇಪ್ಪತ್ತು ಸಾವಿರ ತೀರ್ಪುಗಳನ್ನು ಬರೆದ ಹೆಗ್ಗಳಿಕೆ ಅವರಿಗಿದೆ.



ಮಂಗಳೂರಿನಲ್ಲಿ ಧರ್ಮಸ್ಥಳ ಶ್ರೀ ಮಂಜುನಾಥಸ್ವಾಮಿ ಶಿಕ್ಷಣ ಸಂಸ್ಥೆಯ ಕಾನೂನು ಕಾಲೇಜಿನ ಕಟ್ಟಡದ ಉದ್ಘಾಟನೆ. ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಶ್ರೀಮತಿ ಪಾರ್ವತಿ ವೆಂಕಟಾಚಲಯ್ಯ, ಮುಖ್ಯಮಂತ್ರಿ ಎಂ.ವೀರಪ್ಪ ಮೊಯಿಲಿ ಇದ್ದರು.




ಮೊಹರೆ ಹನುಮಂತರಾವ್ ಅವರು ಕರ್ನಾಟಕದ ಪತ್ರಿಕಾಲೋಕಕ್ಕೆ ಕೊಟ್ಟ ಕೊಡುಗೆಯ ಬಗ್ಗೆ ನಡೆದ ವಿಚಾರಗೋಷ್ಠಿ. ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರ ಜೊತೆ ಸಚಿವ ಎಚ್.ಕೆ.ಪಾಟೀಲ್

## ಭಾರತದ ನ್ಯಾಯಾಂಗಕ್ಷೇತ್ರದ ದಂತಕತೆ

ಕರ್ನಾಟಕದ ಹಿರಿಯ ಚೇತನಗಳಲ್ಲಿ ಅತ್ಯಂತ ಪ್ರಮುಖರಾಗಿರುವವರು ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರು. ತೊಂಬತ್ತನಾಲ್ಕು ವರ್ಷದ ಇಳಿವಯಸ್ಸಿನಲ್ಲೂ ಅವರ ಉತ್ಸಾಹ ಕುಗ್ಗಿಲ್ಲ. ಈಗಲೂ ಅವರು ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ಗ್ರಂಥಗಳನ್ನು ವ್ಯಾಸಂಗ ಮಾಡುತ್ತಿರುತ್ತಾರೆ. ಇತ್ತೀಚಿಗೆ ಅವರ ಮನೆಗೆ ಹೋದಾಗ ಅಮೆರಿಕದ ಸುಪ್ರೀಂ ಕೋರ್ಟ್‌ನ ವೈಶಿಷ್ಟ್ಯ ತಿಳಿಸುವ ಪುಸ್ತಕವನ್ನು ಓದುತ್ತಿದ್ದರು.

ನಮ್ಮಲ್ಲಿ ಪದವಿ ಪಡೆದು ಕೆಲಸಕ್ಕೆ ಸೇರಿದರೆ ಓದು ಮುಗಿಯಿತು ಎಂಬ ಭಾವನೆಯಿದೆ. ವ್ಯಾಸಂಗ ಜೀವಮಾನಪೂರ್ತಿ ನಡೆಯುವ ಪ್ರಕ್ರಿಯೆ ಎಂಬುದು ಶ್ರೀ ವೆಂಕಟಾಚಲಯ್ಯ ಅವರ ಜೀವನದ ಸಂದೇಶವಾಗಿದೆ.

ಶ್ರೀಯುತರು ನ್ಯಾಯಾಂಗಕ್ಷೇತ್ರದ ದಂತೆಕತೆಯಂತಿದ್ದಾರೆ. ಶ್ರೀ ಎಂ.ಎನ್. ವೆಂಕಟಾಚಲಯ್ಯ ಅವರು. ಸುಮಾರು ಇಪ್ಪತ್ತು ಸಾವಿರ ತೀರ್ಪುಗಳನ್ನು ಬರೆದಿರುವ ನ್ಯಾಯಮೂರ್ತಿಗಳು 'ಕ್ಲಾಸಿಕ್' ಎನ್ನುವ ಅಪರೂಪದ ತೀರ್ಪನ್ನು ನೀಡಿದ್ದಾರೆ.

ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಅವಧಿಯಲ್ಲಿ ಶ್ರೀ ವೆಂಕಟಾಚಲಯ್ಯ ಅವರು ಮಧ್ಯಪ್ರದೇಶದಲ್ಲಿ ಅಂದಿನ ಮುಖ್ಯಮಂತ್ರಿ ದಿಗ್ವಿಜಯ ಸಿಂಗ್ ಅವರ ನೆರವಿನಿಂದ ನಿರ್ಮಿಸಿರುವ 'ಜ್ಯೂಡಿಷಿಯಲ್ ಅಕಾಡೆಮಿ' ಭಾರತದ ನ್ಯಾಯಾಂಗಕ್ಷೇತ್ರಕ್ಕೆ ವಿನೂತನ ಕೊಡುಗೆಯಾಗಿದೆ. ಇಲ್ಲಿಂದ ಭಾರತದ ನ್ಯಾಯಾಂಗಕ್ಷೇತ್ರಕ್ಕೆ ಅನೇಕ ಉತ್ತಮ ನ್ಯಾಯಾಧೀಶರು ದೊರೆಯುತ್ತಿದ್ದಾರೆ.

ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರು ನಮ್ಮ ಕುಟುಂಬಕ್ಕೆ ಹಿರಿಯ ವ್ಯಕ್ತಿಗಳಾಗಿದ್ದಾರೆ. ನಾವು ಎಲ್ಲ ಸಂದರ್ಭದಲ್ಲೂ ಅವರ ಆಶೀರ್ವಾದ ಪಡೆದು ಮುಂದಿನ ಕೆಲಸ ಮಾಡುತ್ತೇವೆ. ಅವರ ಜೊತೆ ಸ್ವಲ್ಪ ಕಾಲ ಕಳೆದರೂ ಜೀವನದಲ್ಲಿ ಕಳೆದು ಹೋಗಿರುವ ಉತ್ಸಾಹ ಮತ್ತು ಭರವಸೆಗಳು ಮತ್ತೆ ನಮಗೆ ದೊರೆಯುವುದರಲ್ಲಿ ಯಾವುದೇ ಸಂಶಯವಿಲ್ಲ. ಅವರ ವಿನಯ ಮತ್ತು ಅತಿಥಿ ಸತ್ಕಾರಗಳು ಸದಾ ಕಾಲ ನೆನಪಿನಲ್ಲಿ ಉಳಿಯುವಂತಹುದ್ದು.

ನ್ಯಾಯಮೂರ್ತಿ ವೆಂಕಟಾಚಲಯ್ಯ ಅವರ ವ್ಯಕ್ತಿತ್ವ ಮತ್ತು ಸಾಧನೆ ನಾಡಿಗೆ ಸದಾ ಪ್ರೇರಣೆ ನೀಡುತ್ತದೆ ಎಂಬ ವಿಶ್ವಾಸ ನನ್ನದು.

■ **ಎಚ್.ಕೆ.ಪಾಟೀಲ್**

**ಕಾನೂನು, ಸಂಸದೀಯ ಮತ್ತು ಪ್ರವಾಸೋದ್ಯಮ ಸಚಿವರು ಕರ್ನಾಟಕ ಸರ್ಕಾರ**

# ಮೆತ್ತಗೆ ಇಳಿದ ವಿಕ್ರಮ್ ಲ್ಯಾಂಡರ್ ಸರ್ರನೆ ಏರಿದ ಭಾರತದ ಕೀರ್ತಿ



ವೆಂಕಟೇಶ್ ಪ್ರಸಾದ್ ಬಿ.ಎಸ್.
ಪತ್ರಕರ್ತರು
99023 38906




ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಚಂದ್ರಯಾನ-3ರ ವಿಕ್ರಮ್ ಲ್ಯಾಂಡರ್ ಎಲ್ಲ ಅಡ್ಡಿ ಆತಂಕಗಳನ್ನು ದಾಟಿ ಆಗಸ್ಟ್ 23ರಂದು ಚಂದ್ರನ ದಕ್ಷಿಣ ಧ್ರುವದ ನೆಲದ ಮೇಲೆ ಹಗುರವಾಗಿ ಕಾಲೂರುತ್ತಿದ್ದಂತೆ ದೇಶದ 140 ಕೋಟಿ ಜನ ನಿಟ್ಟುಸಿರುಬಿಟ್ಟರು. ಆ ಕ್ಷಣದ ಫಲಿತಾಂಶಕ್ಕಾಗಿ ಭಾರತ ಮಾತ್ರವಲ್ಲದೆ ಇಡೀ ಜಗತ್ತು ಉಸಿರು ಬಿಗಿಹಿಡಿದು ಕಾಯ್ದು ಕೂತಿತ್ತು. ಎಲ್ಲವೂ ಇಸ್ರೊ ಯೋಜನೆಯಂತೆ ಯಶಸ್ವಿಯಾಗಿ ನಡೆದು ಭಾರತವು ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ಇಳಿಸಿದ ಮೊದಲ ದೇಶ ಎಂಬ ಇತಿಹಾಸ ಬರೆಯಿತು. ಏನಾದರೂ ಆ ಒಂದೇ ಒಂದು ಕ್ಷಣ ಅವಘಡ ಸಂಭವಿಸಿ ಲ್ಯಾಂಡರ್ ಸಾಫ್ಟ್ ಲ್ಯಾಂಡಿಂಗ್ ಮಾಡದೇ ಹೋಗಿದ್ದರೆ ಇಡೀ ಯೋಜನೆ ವಿಫಲವಾಗುತ್ತಿತ್ತು. ಏಕೆಂದರೆ, ನಾಲ್ಕು ವರ್ಷಗಳ ಹಿಂದೆ ಇಸ್ರೊದ ಚಂದ್ರಯಾನ-2 ಸಾಫ್ಟ್ ಲ್ಯಾಂಡಿಂಗ್ ಸಾಧ್ಯವಾಗದೇ ವಿಫಲವಾಗಿತ್ತು. ಅದರ ಜೊತೆಗೆ, ರಷ್ಯಾದ ಲೂನಾ-25 ನೌಕೆ ಕೇವಲ ಮೂರು ದಿನಗಳ ಮೊದಲಷ್ಟೇ ಕಕ್ಷೆಯಿಂದ ಜಾರಿ ಚಂದ್ರನ ನೆಲಕ್ಕೆ ಅಪ್ಪಳಿಸಿ ಆ ದೇಶದ ಯೋಜನೆ ವಿಫಲವಾಗಿತ್ತು. ಅದಕ್ಕೆ ಇನ್ನಷ್ಟು ದಿನಗಳ ಮುಂಚೆ ಒಂದೇ ಒಂದು ತಪ್ಪು ಸಂದೇಶ ರವಾನೆಯಾದ ಕಾರಣಕ್ಕೆ ವಾಯೇಜರ್ ಗಗನನೌಕೆಯ ಭೂಮಿಯೊಂದಿಗಿನ ಸರ್ಕ ಕಡಿದುಹೋಗಿತ್ತು. ಈ ಕಾರಣಗಳಿಂದಾಗಿ ಅಂತರಿಕ್ಷ ಯಾನದಲ್ಲಿ ಯಾವ ಕ್ಷಣ ಏನು ಬೇಕಾದರೂ ಆಗಬಹುದು ಎಂಬ ಆತಂಕ ಕಡೆಯ ಕ್ಷಣದವರೆಗೂ ಇತ್ತು. ಇಂತಹ ಎಲ್ಲಾ ಆತಂಕಗಳನ್ನು ಮೀರಿ ವಿಕ್ರಮ್ ಲ್ಯಾಂಡರ್ ತನ್ನ ಉದ್ದೇಶಿತ ಕಾರ್ಯದಲ್ಲಿ ಯಶಸ್ವಿಯಾಯಿತು.

ವಿಕ್ರಮ್ ಲ್ಯಾಂಡರ್ ಚಂದ್ರನ ಮೇಲೆ ಅಂದುಕೊಂಡಂತೆ ಇಳಿದು ಕೆಲವು ಗಂಟೆಗಳಾದ ಮೇಲೆ ಅದರೊಳಗಿಂದ ರೋವರ್ ಹೊರಕ್ಕೆ ಬಂದು ಚಂದ್ರನ ನೆಲದ ಮೇಲೆ ಅಡ್ಡಾಡುತ್ತಾ ಅಲ್ಲಿನ ಮಣ್ಣನ್ನು ಬಗೆಯುವ ಕೆಲಸ ಮಾಡಿದೆ. ಇದರಿಂದಾಗಿ ಚಂದ್ರನ ಮಣ್ಣಿನಲ್ಲಿನ ಧಾತುಗಳ ಸಂಯೋಜನೆ, ಅಲ್ಲಿನ ದಕ್ಷಿಣ ಧ್ರುವದಲ್ಲಿ ಮಂಜುಗಡ್ಡೆ ರೂಪದಲ್ಲಿ ಇರಬಹುದಾದ ನೀರು, ಅಲ್ಲಿನ ತಾಪಮಾನ, ಅಲ್ಲಿರುವ ಗಂಧಕದ ಪ್ರಮಾಣ ಇಂತಹ ವಿಷಯಗಳಿಗೆ ಸಂಬಂಧಿಸಿದಂತೆ ಇಸ್ರೊಗೆ ಮಹತ್ವದ ಡೇಟಾಗಳು ಸಿಕ್ಕಿವೆ. ಸದ್ಯ ಈ ದತ್ತಾಂಶಗಳ ವಿಶ್ಲೇಷಣೆ ನಡೆಯುತ್ತಿದ್ದು, ಅದಾದ ಮೇಲೆ ಹಲವಾರು ಕುತೂಹಲಕರ ಅಂಶಗಳು ಹೊರಬೀಳುವ ಸಾಧ್ಯತೆಗಳಿವೆ. ಇದರಿಂದಾಗಿ, ಬೇರೆ ಅಂತರಿಕ್ಷಯಾನಗಳಿಗೆ ಚಂದ್ರನನ್ನು ನೆಲೆಯಾಗಿಸಿಕೊಳ್ಳಲು ಸಾಧ್ಯವೇ? ಚಂದ್ರನನ್ನು ಇಂಧನದ ಆಕರವನ್ನಾಗಿ ಮಾಡಿಕೊಳ್ಳಬಹುದಾದ ಸಾಧ್ಯತೆ ಇದೆಯೇ? ಇಂತಹ ಹತ್ತಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಸಾಧ್ಯವಾಗಲಿದೆ. ಅಂದಹಾಗೆ, ಚಂದ್ರಯಾನ-3ರ ರೋವರ್‌ನ ಕಾರ್ಯಾಚರಣೆ ಅವಧಿಯನ್ನು ಚಂದ್ರನಲ್ಲಿನ ಒಂದು ಹಗಲಿನಷ್ಟು ಅವಧಿಗೆ ಮಾತ್ರ ನಿಗದಿಗೊಳಿಸಲಾಗಿತ್ತು. ಚಂದ್ರನ ಒಂದು ದಿನ ಎಂದರೆ ನಮ್ಮ ಭೂಮಿಯ ಸುಮಾರು 28 ದಿನಗಳು. ಅದರಲ್ಲಿ ಹಗಲಿನ ಭಾಗ ನಮ್ಮ ಭೂಮಿಯ ಮೇಲಿನ 14 ದಿನಗಳಿಗೆ ಸಮ. ಇಷ್ಟು ಅವಧಿಯ ಕೆಲಸವನ್ನು ರೋವರ್ ಯಶಸ್ವಿಯಾಗಿ ಮುಗಿಸಿದೆ. ಏನಾದರೂ, ಇನ್ನು ಮುಂದೆಯೂ ಈ ರೋವರ್ ಕೆಲಸ ಮಾಡಿದ್ದೇ ಆದರೆ ಅದು ನಮ್ಮೆಲ್ಲರ ಪಾಲಿಗೆ ಬೋನಸ್ ಆಗಲಿದೆ.

ಲ್ಯಾಂಡರ್‌ನಿಂದ ರೋವರ್ ಹೊರಬಂದು ಇಳಿದುಬಿಟ್ಟರೆ ಸಾಕು ಉಳಿದ ಕೆಲಸವನ್ನು ಅದು ತನ್ನಷ್ಟಕ್ಕೆ ತಾನು ಮಾಡಿಕೊಳ್ಳುತ್ತದೆ ಎಂದು ನಾವು ನಿರಾಳವಾಗಿ ಹೇಳುವ ಪರಿಸ್ಥಿತಿ ಇರುವುದಿಲ್ಲ. ಏಕೆಂದರೆ, ಚಂದ್ರನ ಮೇಲೆ ನಮ್ಮ ಭೂಮಿಯಂತೆ ವಾತಾವರಣದ ಸದೃಢ ರಕ್ಷಾಕವಚ ಇಲ್ಲ. ಅಲ್ಲಿನ ನೆಲಕ್ಕೆ ಯಾವಾಗಲೂ ಉಲ್ಕೆಗಳು ಅಪ್ಪಳಿಸುತ್ತಿರುತ್ತವೆ. ಅಂತಹ ಸನ್ನಿವೇಶದಲ್ಲಿ ಅಲ್ಲಿನ ರೋವರ್‌ಗೆ ಯಾವುದಾದರೂ ಉಲ್ಕೆಯ ತುಣುಕು ಬಡಿದು ಹಾನಿಯಾಗಿಬಿಡಬಹುದು. ಅಥವಾ ಚಂದ್ರನ ಮೇಲೆ ಆಳವಾದ ಕುಳಿಗಳಿವೆ. ರೋವರ್ ಅಲ್ಲಿನ ಯಾವುದಾದರೂ ಕುಳಿಗೆ ಉರುಳಿ ಬಿದ್ದುಬಿಡಬಹುದು. ಆದರೆ ಅದೃಷ್ಟವಶಾತ್ ನಮ್ಮ ರೋವರ್‌ಗೆ ಇಂತಹ ಅಪಾಯಗಳು ಎದುರಾಗಲಿಲ್ಲ. ಮತ್ತೊಂದು ಖುಷಿಯ ವಿಷಯವೆಂದರೆ, ತಾನು ಹೆಜ್ಜೆ ಹಾಕುತ್ತಿರುವಾಗ ಅಡ್ಡ ಬಂದ ಕುಳಿಯೊಂದನ್ನು ರೋವರ್ ಯಶಸ್ವಿಯಾಗಿ ಗುರುತಿಸಿ ತನ್ನ ನಡಿಗೆಯ ಹಾದಿಯನ್ನು ಬದಲಿಸಿಕೊಂಡಿತು. ಇದರಿಂದಾಗಿ ಅದು ದೊಡ್ಡ ಕುಳಿಯೊಳಕ್ಕೆ ಬೀಳುವುದು ತಪ್ಪಿತು! ಅಂದ ಹಾಗೆ, ಸದ್ಯಕ್ಕೆ ನಮ್ಮ ವಿಕ್ರಮ್ ಲ್ಯಾಂಡರ್ ಮತ್ತು ರೋವರ್‌ಗಳನ್ನು ಇಸ್ರೊ ವಿಜ್ಞಾನಿಗಳು ಇಲ್ಲಿಂದ ಕಮಾಂಡ್‌ಗಳನ್ನು ಕಳುಹಿಸಿ ನಿದ್ರಾವಸ್ಥೆಗೆ (ಸ್ಲೀಪಿಂಗ್ ಮೋಡ್) ಜಾರಿಸಿದ್ದಾರೆ. ಚಂದ್ರನಲ್ಲಿ ಮತ್ತೆ ಸೂರ್ಯನ ಬೆಳಕು ಬಿದ್ದು ಹಗಲು ಮೂಡಿದಾಗ ಇವುಗಳನ್ನು ಪುನಃ ಚಾಲೂ ಮಾಡಲು ಪ್ರಯತ್ನಿಸುತ್ತಾರೆ. ಆದರೆ, ಅದು ಎಷ್ಟರ ಮಟ್ಟಿಗೆ ಫಲ ಕೊಡುತ್ತದೆ ಎನ್ನುವುದು ಇನ್ನೂ ಗೊತ್ತಿಲ್ಲ. ಯಾಕೆಂದರೆ,




ಚಂದ್ರನಲ್ಲಿ ರಾತ್ರಿಯ ತಾಪಮಾನ 0 ಗಿಂತ 150ರಿಂದ 200 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆ ಇರುತ್ತದೆ. ಅಷ್ಟು ಶೀತಲ ವಾತಾವರಣದಲ್ಲಿದ್ದ ಲ್ಯಾಂಡರ್ ಮತ್ತು ರೋವರ್‌ನ ಎಲೆಕ್ಟ್ರಾನಿಕ್ ಬಿಡಿ ಭಾಗಗಳು ಕೆಲಸ ಮಾಡುವ ಸ್ಥಿತಿಯಲ್ಲಿರುತ್ತವೋ ಅಥವಾ ನಿಷ್ಕ್ರಿಯವಾಗಿರುತ್ತವೋ ಎಂಬುದು ಗ್ಯಾರಂಟಿ ಇಲ್ಲ. ಹೀಗಾಗಿ, ಚಂದ್ರನಲ್ಲಿ ಮತ್ತೆ ಸೂರ್ಯ ಹುಟ್ಟಲಿರುವ ಸೆಪ್ಟೆಂಬರ್ 20ರ ವೇಳೆಗೆ ಇಲ್ಲಿಂದ ಅವನ್ನು ಎಚ್ಚರಗೊಳಿಸಲು ಕಮಾಂಡ್ ಕಳಿಸಲಾಗುತ್ತದೆ. ಈ ಆಜ್ಞಾ ಸಂದೇಶಗಳಿಗೆ ಅವು ಹೇಗೆ ಸ್ಪಂದಿಸುತ್ತವೆ ಎಂಬುದು ಆಮೇಲಷ್ಟೇ ಗೊತ್ತಾಗುತ್ತದೆ.

ಕಡಿಮೆ ಬಜೆಟ್‌ನ ಯೋಜನೆ: ಇಸ್ರೊದ ಚಂದ್ರಯಾನ-3ರ ಸುಮಾರು 650 ಕೋಟಿ ರೂಪಾಯಿಯ ಯೋಜನೆ. ಇದು ಅಮೆರಿಕದ ಇಂತಹುದೇ ಯೋಜನೆಗೆ ಹೋಲಿಸಿದರೆ ಹಲವು ಪಟ್ಟುಗಳಷ್ಟು ಕಡಿಮೆ. ಅಷ್ಟೇ ಏಕೆ, ರಷ್ಯಾದ ವಿಫಲವಾದ ಲೂನಾ-25 ಯೋಜನೆಗೆ 1,650 ಕೋಟಿ ರೂಪಾಯಿ ವೆಚ್ಚ ಮಾಡಲಾಗಿತ್ತು. ಹಾಗೆ ನೋಡಿದರೆ, ಕೆಲವು ಹಾಲಿವುಡ್ ಚಿತ್ರಗಳ ಬಜೆಟ್‌ಗಿಂತಲೂ ಚಂದ್ರಯಾನ-3ರ ವೆಚ್ಚ ಕಡಿಮೆ. ಈ ವಿಷಯದಲ್ಲಿ ಇಸ್ರೊ ವಿಜ್ಞಾನಿಗಳು ಕಡಿಮೆ ಬಜೆಟ್‌ನ ಯೋಜನೆಯನ್ನೇ ಆಯ್ದುಕೊಂಡಿದ್ದರು. ಅಂದರೆ, ಕಡಿಮೆ ಇಂಧನ ಹಾಗೂ ಕನಿಷ್ಠ ಶಕ್ತಿಶಾಲಿ ಎಂಜಿನ್‌ಗಳನ್ನು ಬಳಸಿ ಚಂದ್ರನನ್ನು ಮುಟ್ಟುವ ಗುರಿ ಹಾಕಿಕೊಂಡಿದ್ದರು. ಅದಕ್ಕಾಗಿಯೇ, ಭೂಮಿಯ ಹಾಗೂ ಚಂದ್ರನ ಗುರುತ್ವಾಕರ್ಷಣ ಶಕ್ತಿಯನ್ನು ಆಧರಿಸಿ ಅಲ್ಲಿಗೆ ತಲುಪಬೇಕೆಂಬ ನೀಲನಕ್ಷೆ ಹಾಕಿಕೊಂಡಿದ್ದರು. ಗುರುತ್ವಾಕರ್ಷಣೆ ಶಕ್ತಿ ಆಧಾರಿತವಾಗಿ ಸಾಗಬೇಕೆಂದರೆ ಲ್ಯಾಂಡರ್, ರೋವರ್ ಹೀಗೆ ವಿವಿಧ ಕೋಶಗಳನ್ನು ಹೊತ್ತ ಗಗನನೌಕೆಯನ್ನು ಮೊದಲಿಗೆ ಭೂಮಿಯ ಸುತ್ತಲಿನ ಬೇರೆ ಬೇರೆ ಕಕ್ಷೆಗಳಲ್ಲಿ ಸುತ್ತಿಸಬೇಕು. ಕೋಳಿಮೊಟ್ಟೆ ಆಕಾರದ ದೀರ್ಘವೃತ್ತದ ಈ ಕಕ್ಷೆಗಳ ಸಮೀಪದ ಅಂತರ (ಪೆರಿಜಿ) ಮತ್ತು ದೂರದ ಅಂತರಗಳನ್ನು (ಅಪೋಜಿ) ನಿಗದಿತ ಸ್ಥಳಗಳಲ್ಲಿ ಬದಲಿಸಬೇಕು. ಬಾಹ್ಯಾಕಾಶದ ಪರಿಭಾಷೆಯಲ್ಲಿ ಇದಕ್ಕೆ "ಕಕ್ಷೆ ಏರಿಸುವ ಕಾರ್ಯಾಚರಣೆ" ಎನ್ನುತ್ತಾರೆ. ಹೀಗೆ ಗಗನ ನೌಕೆಯ ಮಾರ್ಗವನ್ನು ಒಂದು ಕಕ್ಷೆಯಿಂದ ಮತ್ತೊಂದು ಕಕ್ಷೆಗೆ ಬದಲಾಯಿಸುವಾಗ ಗಗನನೌಕೆಯ ವೇಗವನ್ನು ಕರಾರುವಕ್ಕಾಗಿ ಹೆಚ್ಚಿಸಬೇಕಾಗುತ್ತದೆ. ಇದನ್ನು ಮಾಡಲು ನೌಕೆಯ ಎಂಜಿನ್‌ಗೆ ನಿರ್ದಿಷ್ಟ ಮಟ್ಟದಲ್ಲಿ ಬಲ ತುಂಬಬೇಕಾಗುತ್ತದೆ. ಇದು ಚಾಚೂತಪ್ಪದ ಲೆಕ್ಕಾಚಾರದ ಪ್ರಕಾರವೇ ನಡೆಯಬೇಕಾಗುತ್ತದೆ. ಏಕೆಂದರೆ, ಇಂತಹ ಸಂರ್ಭದಲ್ಲೇನಾದರೂ ಎಡವಟ್ಟಾದರೆ ಗಗನನೌಕೆ ಕಕ್ಷೆಯಿಂದ ಕಳಚಿ ಹೋಗುವ ಅಪಾಯವಿರುತ್ತದೆ! ಚಂದ್ರಯಾನ-3ರಲ್ಲಿ ಹೀಗೆ ಐದು ಹಂತಗಳಲ್ಲಿ ಭೂಮಿಯ ಗುರುತ್ವಾಕರ್ಷಣ ವಲಯದಲ್ಲಿ ನೌಕೆಯನ್ನು ಸುತ್ತಿಸಲಾಯಿತು. ಅದಾದ ಮೇಲೆ, ಮುಂದಿನ ಹಂತದಲ್ಲಿ, ಗಗನ ನೌಕೆಯನ್ನು ಚಂದ್ರನ ಗುರುತ್ವಾಕರ್ಷಣ ವಲಯಕ್ಕೆ ಸೇರಿಸಬೇಕು. ಅಂದರೆ, ಅದುವರೆಗೆ ಭೂಮಿಯ ಸುತ್ತ ತಿರುಗುತ್ತಿದ್ದ ನೌಕೆಯನ್ನು ಅಲ್ಲಿಂದ ಮುಂದೆ ಚಂದ್ರನ ಸುತ್ತ ತಿರುಗುತ್ತಾ ಸಾಗುವಂತೆ ಮಾಡಬೇಕು. ಇವೆಲ್ಲಾ ತುಂಬಾ ಸೂಕ್ಷ್ಮ ಲೆಕ್ಕಾಚಾರದ ಹಾಗೂ ಸವಾಲಿನ ಸನ್ನಿವೇಶಗಳು. ಏಕೆಂದರೆ, ಭೂಮಿಯ ಗುರುತ್ವಾಕರ್ಷಣ ಶಕ್ತಿಯೇ ಬೇರೆ. ಚಂದ್ರನ ಗುರುತ್ವಾಕರ್ಷಣ ಶಕ್ತಿಯೇ ಬೇರೆ. ಈ ವ್ಯತ್ಯಾಸಗಳಿಗೆ ನೌಕೆ ಒಗ್ಗುವಂತೆ ಮಾಡಬೇಕು. ಅದು ಸಾಧ್ಯವಾಗಬೇಕೆಂದರೆ, ನೌಕೆಯ ವೇಗ ಯಾವ ಕಕ್ಷೆಯಲ್ಲಿ ಎಷ್ಟಿರಬೇಕು? ಅಷ್ಟು ವೇಗ ಕಾಯ್ದುಕೊಳ್ಳಬೇಕೆಂದರೆ ಎಂಜಿನ್ ಗೆ ಎಷ್ಟು ಬಲ ತುಂಬಬೇಕು, ಇವೆಲ್ಲದರ ಬಗ್ಗೆ ಎಣಿಕೆ ತಪ್ಪದಂತೆ ಲೆಕ್ಕಾಚಾರ ಹಾಕಿರಬೇಕು ಹಾಗೂ ಅದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಬೇಕು.

ಇನ್ನು, ನೌಕೆಯನ್ನು ಚಂದ್ರನ ಗುರುತ್ವಾಕರ್ಷಣಕ್ಕೆ ಒಳಪಡಿಸಿದ ಮೇಲೆ ಅದು ಚಂದ್ರನ ಸುತ್ತ ಪರಿಭ್ರಮಿಸುವ ಕಕ್ಷೆಯನ್ನು ಕ್ರಮೇಣವಾಗಿ ಕಡಿಮೆ ಮಾಡುತ್ತಾ ಗುರಿಯತ್ತ ಸಾಗಬೇಕು. ಇಲ್ಲಿ, ಭೂಮಿಯ ಗುರುತ್ವಾಕರ್ಷಣ ವಲಯದಲ್ಲಿದ್ದಾಗ ನೌಕೆಗೆ ಏನು ಮಾಡಲಾಗಿರುತ್ತದೋ ಅದಕ್ಕೆ ಬರೋಬ್ಬರಿ ವಿರುದ್ಧವಾದ ಕಾರ್ಯಾಚರಣೆ ಮಾಡಬೇಕು. ಅಂದರೆ, ಭೂಮಿಯ ಗುರುತ್ವಾಕರ್ಷಣ ವಲಯದಲ್ಲಿ ನೌಕೆಯ ಕಕ್ಷೆಯನ್ನು ಹೆಚ್ಚಿಸುತ್ತಾ ಹೋದರೆ ಇಲ್ಲಿ ಅದನ್ನು ಕಡಿಮೆ ಮಾಡುತ್ತಾ ಹೋಗಬೇಕು. ಚಂದ್ರಯಾನ-3ರಲ್ಲಿ ಇದನ್ನು ಮೂರು ಹಂತಗಳಲ್ಲಿ ಮಾಡಲಾಯಿತು. ಹೀಗೆ ನೌಕೆಯ ಪಥವನ್ನು ಒಂದು ಕಕ್ಷೆಯಿಂದ ಇನ್ನೊಂದು ಕಕ್ಷೆಗೆ ಬದಲಿಸಲು "ಡೀಬೂಸ್ಟಿಂಗ್" ಕಾರ್ಯಾಚರಣೆ ನಡೆಸಬೇಕು. ಮೊದಲೇ ಹೇಳಿದಂತೆ, ಇಲ್ಲಿ ಕೂಡ ನೌಕೆಗೆ ತುಂಬುವ ಬಲದಲ್ಲಿ ಅಥವಾ ಅದರ ವೇಗದಲ್ಲಿ ಏರುಪೇರಾದರೆ ನೌಕೆ ಕಕ್ಷೆಯಿಂದ ಕಳಚಿಕೊಂಡುಬಿಡುತ್ತದೆ! ಹೀಗೆ ಯಾವುದೇ ಕ್ಷಣದಲ್ಲಿ ಯೋಜನೆ ವಿಫಲವಾಗಿ ಬಿಡುವ ಸಾಧ್ಯತೆ ಇರುತ್ತದೆ.

### ಸಿದ್ಧತೆ ಹೇಗಿತ್ತು?

ಚಂದ್ರಯಾನ-2ರ ಕಡೆಯ ಕ್ಷಣದ ವೈಫಲ್ಯದ ಹಿನ್ನೆಲೆಯಲ್ಲಿ ಈ ಸಲ ಸಾಕಷ್ಟು ಸುಧಾರಣೆಗಳನ್ನು ಮಾಡಲಾಗಿತ್ತು. ಅಂದರೆ ಚಂದ್ರಯಾನ-2 ಯೋಜನೆಯ ಆರ್ಬಿಟರ್ ಅನ್ನು ಚಂದ್ರನ ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಗಿತ್ತು. ಆರ್ಬಿಟರ್ ಈಗಲೂ ಸುತ್ತುತ್ತಿದ್ದು, ಚಂದ್ರಯಾನ-3ರ ಲ್ಯಾಂಡರ್ ನೊಂದಿಗೆ ಸಂರ್ಕದಲ್ಲೂ ಇದೆ. ಆದರೆ ಆಗ ವಿಫಲವಾಗಿದ್ದು ಲ್ಯಾಂಡರ್. ಅದು ಚಂದ್ರನ ನೆಲಕ್ಕೆ ಬಲವಾಗಿ ಅಪ್ಪಳಿಸಿದ್ದೇ ಅದಕ್ಕೆ ಕಾರಣವಾಗಿತ್ತು. ಆದ್ದರಿಂದ ಈ ಸಲ ಲ್ಯಾಂಡರ್‌ಗೆ ಇನ್ನಷ್ಟು ಗಟ್ಟಿಮುಟ್ಟಾದ



## ಪ್ರಧಾನಿ ಸಾಕ್ಷಿ ಮುಖ್ಯಮಂತ್ರಿ ಅಭಿನಂದನೆ:

ಚಂದ್ರಯಾನ–2 ವಿಫಲವಾದಾಗ ಆಗಿನ ಇಸ್ರೊ ಅಧ್ಯಕ್ಷರನ್ನು ಅಪ್ಪಿ ಸಮಾಧಾನದ ಮಾತುಗಳನ್ನು ಆಡಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಈ ಸಲ ಚಂದ್ರಯಾನ–3ರ ಸಾಫ್ಟ್ ಲ್ಯಾಂಡಿಂಗ್ ಗೆ ದೂರದ ದಕ್ಷಿಣ ಆಫ್ರಿಕಾದಿಂದಲೇ ಸಾಕ್ಷಿಯಾಗಿದ್ದರು. ಇಸ್ರೊ ಅಧ್ಯಕ್ಷ ಸೋಮನಾಥ್ ಅವರು "ಇಂಡಿಯಾ ಈಸ್ ಆನ್ ದಿ ಮೂನ್" ಎಂದು ಪ್ರಕಟಿಸುತ್ತಿದ್ದಂತೆ ವರ್ಚುಯಲ್ ಆಗಿ ಭಾಗಿಯಾಗಿದ್ದ ನರೇಂದ್ರ ಮೋದಿಯವರು ಭಾರತದ ತ್ರಿರ್ವ ಧ್ವಜವನ್ನು ಹಾರಿಸಿ ಸಂಭ್ರಮಪಟ್ಟರು. ಆಮೇಲೆ, ಅವರು ಭಾರತಕ್ಕೆ ವಾಪಸಾಗುತ್ತಿದ್ದಂತೆ ಬೆಂಗಳೂರಿನ ಇಸ್ರೊ ಕಚೇರಿಗೆ ಭೇಟಿಕೊಟ್ಟು ಯೋಜನೆಯಲ್ಲಿ ಭಾಗಿಯಾದವರನ್ನು ಅಭಿನಂದಿಸಿ ಕೊಂಡಾಡಿದರು.

ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಇಸ್ರೊ ಸಾಧನೆಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಅವರು ಇಸ್ರೋಗೆ ತೆರಳಿ ವಿಜ್ಞಾನಿಗಳನ್ನು ಅಭಿನಂದಿಸಿದ್ದಾರೆ. ಉಳಿದಂತೆ ದೇಶ ವಿದೇಶಗಳಿಂದಲೂ ಯಶಸ್ವಿಗಾಗಿ ಅಭಿನಂದನೆಯ ಮಹಾಪೂರ ಹರಿದು ಬರುತ್ತಿದೆ.

ಕಾಲುಗಳನ್ನು ಅಳವಡಿಸಲಾಗಿತ್ತು. ಅಂದರೆ, ಒಂದು ವೇಳೆ, ಚಂದ್ರನ ನೆಲಕ್ಕೆ ಇಳಿಯುವಾಗ ಒಂದಷ್ಟು ಬಲವಾಗಿ ಅಪ್ಪಳಿಸಿದರೂ ಅದನ್ನು ತಡೆದುಕೊಳ್ಳುವಂತೆ ಎಚ್ಚರಿಕೆ ವಹಿಸಲಾಗಿತ್ತು. ಹಾಗೆಯೇ, ಎಂಜಿನ್ ಕೈ ಕೊಟ್ಟರೆ ಎಂಬ ಕಾರಣಕ್ಕಾಗಿ ಹೆಚ್ಚುವರಿ ಎಂಜಿನ್ ಜೋಡಿಸಲಾಗಿತ್ತು. ಸೆನ್ಸರ್‌ಗಳ ಅಳವಡಿಕೆ, ಸಾಫ್ಟ್‌ವೇರ್ ಬಳಕೆ, ಹಾರ್ಡ್‌ವೇರ್ ಜೋಡಣೆ ಹೀಗೆ ಎಲ್ಲದರಲ್ಲೂ ಸುಧಾರಣೆ ಮಾಡಿಕೊಳ್ಳಲಾಗಿತ್ತು. ಜೊತೆಗೆ, ಚಳ್ಳಕೆರೆ ಹತ್ತಿರ ಚಂದ್ರನ ನೆಲದ ಮೇಲಿರುವಂತಹ ಕುಳಿಗಳಿರುವ ಪ್ರದೇಶವನ್ನು ಕೃತಕವಾಗಿ ಸೃಷ್ಟಿಸಿ ಅಲ್ಲಿ ನೌಕೆಯನ್ನು ಸಾಫ್ಟ್ ಲ್ಯಾಂಡಿಂಗ್ ಮಾಡಿಸುವ ಪ್ರಯೋಗಗಳನ್ನು ಮಾಡಲಾಗಿತ್ತು. ಸಿಮ್ಯುಲೇಶನ್ ತಾಂತ್ರಿಕತೆಯನ್ನು ಬಳಸಿ ಸಾಕಷ್ಟು ಪರ್ವತಯಾರಿ ನಡೆಸಲಾಗಿತ್ತು.

ಚಂದ್ರಯಾನ–3ರ ಯಶಸ್ಸು ಹಲವು ಅವಕಾಶಗಳ ಬಾಗಿಲನ್ನು ನಮಗೆ ತೆರೆಯುವ ಸಾಧ್ಯತೆ ಇದೆ. ಒಂದೆಡೆ, ಪ್ರಪಂಚದ ಬೇರೆ ರಾಷ್ಟ್ರಗಳು ತಮ್ಮ ಅಂತರಿಕ್ಷ ಯಾನದ ಯೋಜನೆಗಳಿಗಾಗಿ ಭಾರತದೊಂದಿಗೆ ಸಹಭಾಗಿತ್ವಕ್ಕೆ ಮುಂದಾಗಬಹುದು. ಹೀಗಾಗಿ, ಇದು ನಮ್ಮ ವಾಣಿಜ್ಯ ಅವಕಾಶಗಳ ಜೊತೆಗೆ ಜ್ಞಾನದಿಗಂತವನ್ನು ವಿಸ್ತರಿಸಿಕೊಳ್ಳಲು ಎಡೆ ಮಾಡಿಕೊಡಬಹುದು. ಮತ್ತೊಂದೆಡೆ, ಅಂತರಿಕ್ಷಯಾನ ಎಂದರೆ ಖಗೋಳ, ಭೌತಶಾಸ್ತ್ರ, ಗಣಿತ, ಎಂಜಿನಿಯರಿಂಗ್ ಇವೆಲ್ಲವುಗಳ ಸಂಗಮ. ಇದು, ನಮ್ಮ ಯುವ ತಲೆಮಾರಿನವರಿಗೆ ಮೂಲ ವಿಜ್ಞಾನಗಳ ಅಧ್ಯಯನ ಮತ್ತು ಸಂಶೋಧನೆಗಳಿಗೆ ದೊಡ್ಡ ಪ್ರೇರಣೆಯೂ ಆಗಬಹುದು.

### ಚಂದ್ರನ ನೆಲದಿಂದಲೂ ಮೇಲಕ್ಕೇರಿದ ಲ್ಯಾಂಡರ್

ಇತ್ತೀಚೆಗೆ ಇಸ್ರೊ ವಿಜ್ಞಾನಿಗಳು ಚಂದ್ರಯಾನ–3 ಲ್ಯಾಂಡರ್ ಅನ್ನು ಚಂದ್ರನ ಮೇಲ್ಮೈನಿಂದ ಕೆಲವು ಅಡಿಗಳಷ್ಟು ಎತ್ತರಕ್ಕೆ ಹಾರಿಸಿ ಮತ್ತೆ ಅದನ್ನು ಸಾಫ್ಟ್ ಲ್ಯಾಂಡಿಂಗ್ ಮಾಡಿಸಿದ್ದಾರೆ. ಇದು ಕೂಡ ಭವಿಷ್ಯದ ದೃಷ್ಟಿಯಿಂದ ಮುಖ್ಯವಾಗಿದೆ. ಏಕೆಂದರೆ, ಮುಂದಿನ ಚಂದ್ರಯಾನ ಯೋಜನೆಗಳಲ್ಲಿ ಮನುಷ್ಯರನ್ನು ಅಲ್ಲಿಗೆ ಕಳುಹಿಸಿ ಅಲ್ಲಿನ ಮಣ್ಣನ್ನು ಸಂಗ್ರಹಿಸಿ ತರಬೇಕೆಂಬ ಆಲೋಚನೆಗಳಿವೆ. ಇದು ಸಾಧ್ಯವಾಗಬೇಕೆಂದರೆ, ಚಂದ್ರನ ಮೇಲಿಳಿದ ಲ್ಯಾಂಡರ್ ಪುನಃ ಮೇಲಕ್ಕೇರಿ ಭೂಮಿಯ ಕಡೆಗೆ ಬರಬೇಕಾಗುತ್ತದೆ. ಹೀಗಾಗಿ, ಈ ಸಾಧ್ಯತೆಯ ಬಗ್ಗೆ ಇದು ವಿಶ್ವಾಸ ಮೂಡಿಸಿದೆ.

# ...ವೈದ್ಯಕೀಯ ಪ್ರವಾಸೋದ್ಯಮಕ್ಕೆ ಬೇಕು ಕಾಯಕಲ್ಪ

◀◀ ...ಮೊದಲನೇ ಪುಟದಿಂದ

ಗ್ರಾಮೀಣ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಉಪ ಆರೋಗ್ಯಕೇಂದ್ರಗಳು ಅಸ್ತಿತ್ವಕ್ಕೆ ಬಂದು ಉತ್ತಮ ರೀತಿಯಲ್ಲಿ ಕೆಲಸ ಮಾಡಿವೆ. ಸಾವಿರಾರು ಆರೋಗ್ಯ ಕಾರ್ಯಕರ್ತರ ಹೋರಾಟದ ಫಲವಾಗಿ ಭಾರತ ಕೆಲಸ ಸಾಂಕ್ರಮಿಕ ರೋಗಗಳಾದ ಪ್ಲೇಗ್, ಸಿಡುಬು, ಕಾಲಾರ, ಮಲೇರಿಯಾ, ಕ್ಷಯ, ಪೋಲಿಯೋ ಮೊದಲಾದ ಕಾಯಿಲೆಗಳನ್ನು ಇಲ್ಲವಾಗಿಸಿದೆ. ಇಂತಹ ಸಾಧನೆಯ ಹಿನ್ನೆಲೆಯನ್ನು ಗಮನಿಸಬೇಕು.

ಭಾರತದಲ್ಲಿ 1950ರಲ್ಲಿ 28 ಮೆಡಿಕಲ್ ಕಾಲೇಜ್‌ಗಳು ಮಾತ್ರವಿದ್ದವು. ಹತ್ತು ಸಾವಿರ ಜನರಿಗೆ ಒಬ್ಬ ವೈದ್ಯರಿರುತ್ತಿದ್ದರು. ಇಂದು ದೇಶದಲ್ಲಿ 706 ಮೆಡಿಕಲ್ ಕಾಲೇಜ್‌ಗಳಿವೆ. 22 'ಅಖಿಲ ಭಾರತ ವೈದ್ಯಕೀಯ ಸಂಸ್ಥೆ'ಗಳಿವೆ. (A.I.M.S) ಕರ್ನಾಟಕ ರಾಜ್ಯವೊಂದರಲ್ಲೇ 56 ಮೆಡಿಕಲ್ ಕಾಲೇಜ್‌ಯಿದೆ. ಅತಿ ಹೆಚ್ಚು ಎಂ.ಬಿ.ಬಿ.ಎಸ್. ಸೀಟ್‌ಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕವು ಒಂದಾಗಿದೆ. The world Federation Medical Education (W.F.M.E) ಸಂಸ್ಥೆ ವಿಶ್ವದ ವೈದ್ಯಕೀಯ ಕ್ಷೇತ್ರಕ್ಕೆ ಮಾನ್ಯತೆ ನೀಡಬಲ್ಲ ಉನ್ನತ ಮಟ್ಟದ ಸಂಸ್ಥೆಯಾಗಿದೆ. ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿರುವ ಡಾ.ಮನ್ಸುಖ್ ಮಾಂಡವಿಯಾ ಅವರು ತುಮಕೂರಿಗೆ ಬಂದಾಗ 'ಈ ಸಲ ಜಿ.20. ರಾಷ್ಟ್ರಗಳ ಸಮಾವೇಶ ನಡೆದಾಗ ವೈದ್ಯಕೀಯ ಶಿಕ್ಷಣ ಶಾಶ್ವತವಾಗಿ ಅನುಕೂಲವಾಗುವ ಕೆಲಸಗಳನ್ನು ಮಾಡುತ್ತೇವೆ' ಎಂದಿದ್ದರು. ಅದನ್ನು ಮಾಡಿ ತೋರಿಸಿದ್ದಾರೆ. ಅವರಿಗೆ ಅಭಿನಂದನೆಗಳು. ಅದರಂತೆ W.F.M.E The NATIONAL MEDICAL COMMISSION ಭಾರತದಲ್ಲಿ ಮಾನ್ಯತೆ ಮಾಡಿದ್ದ 706 ಮೆಡಿಕಲ್ ಕಾಲೇಜುಗಳಿಗೆ ಮಾನ್ಯತೆ ಕೊಟ್ಟಿದೆ. ಮುಂದೆ ಹತ್ತು ವರ್ಷ ಎನ್.ಎಂ.ಸಿ. ಮಾನ್ಯತೆ ನೀಡುವ ಮೆಡಿಕಲ್ ಕಾಲೇಜುಗಳಿಗೆ ಮಾನ್ಯತೆ ನೀಡುತ್ತದೆ. ಇದರಿಂದಾಗಿ ನಮ್ಮ ದೇಶದಲ್ಲಿ ವೈದ್ಯಕೀಯ ಪದವಿ ಪಡೆದವರು ವಿದೇಶದಲ್ಲಿ ನೇರವಾಗಿ ಸ್ನಾತಕೋತ್ತರ ಪದವಿಗಳನ್ನು ಮಾಡಬಹುದು. ಹಾಗೂ ಖಾಸಗಿಯಾಗಿ ಪ್ರಾಕ್ಟೀಸ್ ಮಾಡಬಹುದು. ಈ ತನಕ ನಮ್ಮ ವಿದ್ಯಾರ್ಥಿಗಳು ಆಯಾಯ ದೇಶದ ಪರೀಕ್ಷೆಯನ್ನು ಪಾಸು ಮಾಡಿ ಶಿಕ್ಷಣ ಮುಂದುವರಿಸಬೇಕಾಗಿತ್ತು.

1947ರಲ್ಲಿ ಏಳು ಸಾವಿರ ಆಸ್ಪತ್ರೆಗಳಿದ್ದವು. ಇಂದು ಲಕ್ಷಕ್ಕೂ ಅಧಿಕವಾಗಿ ಆಸ್ಪತ್ರೆಗಳಿವೆ. ಭಾರತದಲ್ಲಿ ಎ.ಅ.ಖ. ಮಾನ್ಯತೆ ಪಡೆದ 39 ಆಸ್ಪತ್ರೆಗಳಿವೆ. 1994ರಲ್ಲಿ Joint Commission International (JCI) ಮಾನ್ಯತೆ ಪಡೆದ ಗುಂಪಿನ ಆಸ್ಪತ್ರೆಗಳು ತಲೆಯೆತ್ತಿದವು. ಅಂತಾರಾಷ್ಟ್ರೀಯ ಗ್ರಾಹಕ ಶಿಕ್ಷಣ ಮತ್ತು ಸೇವೆಗೆ ಅನುಗುಣವಾಗಿ ಈ ಆಸ್ಪತ್ರೆಗಳು ಕೆಲಸ ಮಾಡುತ್ತವೆ ಎಂಬುದು ಈ ಮಾನ್ಯತೆ ಉದ್ದೇಶ.

ಅದೇ ಆಧಾರದ ಮೇಲೆ National Accreditation Board for Hospitals (ಆಸ್ಪತ್ರೆಗಳು ಮತ್ತು ಆರೋಗ್ಯಸೇವೆ ಒದಗಿಸುವ ರಾಷ್ಟ್ರೀಯ ಮಾನ್ಯತಾ ಮಂಡಳಿ) ಸಹ ಅಂತಾರಾಷ್ಟ್ರೀಯ ಮಾನದಂಡಗಳಿಗನುಗುಣವಾಗಿ ಆಸ್ಪತ್ರೆಗಳಿಗೆ ಮಾನ್ಯತೆ ನೀಡುತ್ತದೆ. ಬೆಂಗಳೂರು ನಗರದಲ್ಲಿ ಎನ್.ಎ.ಬಿ.ಎಚ್. ಮಾನ್ಯತೆ ಪಡೆದ 19 ಆಸ್ಪತ್ರೆಗಳಿವೆ. ತುಮಕೂರು ಜಿಲ್ಲೆಯಲ್ಲಿ ಎನ್.ಎ.ಬಿ.ಎಚ್. ಮಾನ್ಯತೆ ಪಡೆದ ಆಸ್ಪತ್ರೆಗಳಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆ ಮಾತ್ರವಿದೆ.

ಭಾರತದಲ್ಲಿ ಚೆನ್ನೈ ಮಾತ್ರ ಆರೋಗ್ಯನಗರ ಎಂಬ ಖ್ಯಾತಿ ಪಡೆದಿದೆ. ಭಾರತಕ್ಕೆ ಕಳೆದ ಸಾಲಿನಲ್ಲಿ ಆರೋಗ್ಯದ ವಿಚಾರಕ್ಕಾಗಿ ಬಂದ ವಿದೇಶಿ ಪ್ರವಾಸಿಗರಲ್ಲಿ ಶೇಕಡ 40ರಷ್ಟು ಜನ ಚೆನ್ನೈಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅದಕ್ಕೆ ಬಲವಾದ ಕಾರಣಗಳಿವೆ ತಮಿಳುನಾಡು ಸ್ವಾತಂತ್ರ್ಯ ಪೂರ್ವದಿಂದಲೂ ಉತ್ತಮ ವೈದ್ಯಕೀಯ ಸೇವೆಗೆ ಪ್ರಸಿದ್ಧಿಯಾಗಿದೆ. ಕೇವಲ ಚೆನ್ನೈ ಮಾತ್ರವಲ್ಲ ಕೊಯಮತ್ತೂರು ಮತ್ತು ವೆಲ್ಲೂರುಗಳು ಸಹ ವೈದ್ಯಕೀಯ ಸೇವೆಗೆ ಪ್ರಸಿದ್ಧಿಯಾಗಿದೆ. ಚೆನ್ನೈನಲ್ಲಿ ಈಗ 12,500 ಆಸ್ಪತ್ರೆಗಳಿವೆ. ವಿದೇಶೀಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ಕಾರಣ ತಮಿಳುನಾಡಿನಲ್ಲಿ ಆರೋಗ್ಯವಲಯ ಸದೃಢವಾಗಿದೆ. ತಮಿಳುನಾಡಿನ ಆಯವ್ಯಯದಲ್ಲಿ ವೈದ್ಯಕೀಯ ಪ್ರವಾಸೋದ್ಯಮಕ್ಕೆ ಗಣನೀಯ ಸ್ಥಾನವಿದೆ.

ವಿದೇಶಿಯರು ಭಾರತಕ್ಕೆ ಏಕೆ ವೈದ್ಯಕೀಯ ಸೇವೆಗೆ ಈ ಪ್ರಮಾಣದಲ್ಲಿ ಬರುತ್ತಿದ್ದಾರೆ ಎಂಬುದಕ್ಕೆ ಉದಾಹರಣೆಯೊಂದನ್ನು ಕೊಡಬಹುದು. ಯಕೃತ್ ಕಸಿ (Liver Transplant) ಶಸ್ತ್ರಚಿಕಿತ್ಸೆ ಮಾಡಲು ಅಮೆರಿಕದಲ್ಲಿ 3 ಲಕ್ಷ ಡಾಲರ್ ಹಣ ಬೇಕಾಗುತ್ತದೆ. ಅದೇ ಶಸ್ತ್ರಚಿಕಿತ್ಸೆಯನ್ನು ತೈವಾನ್‌ನಲ್ಲಿ 85 ಲಕ್ಷ ಡಾಲರ್‌ನಲ್ಲಿ ಮಾಡಿಸಬಹುದು. ಭಾರತದಲ್ಲಿ ಯಕೃತ್ ಕಸಿ ಶಸ್ತ್ರಚಿಕಿತ್ಸೆಗೆ 25ರಿಂದ 30 ಲಕ್ಷರೂ.ಗಳು ವೆಚ್ಚವಾಗಬಹುದು. ಗುಣಮಟ್ಟದ ಆರೋಗ್ಯ ಸೇವೆ ನೀಡುವುದರಲ್ಲಿ ಭಾರತ ಇಂದು ಜಾಗತಿಕವಾಗಿ ಗುರುತಿಸಲೇಬೇಕಾದ ರಾಷ್ಟ್ರವಾಗಿದೆ.

ಭಾರತದಲ್ಲಿ ಆರೋಗ್ಯ ಸೇವೆ ತ್ವರಿತವಾಗಿ ದೊರೆಯುತ್ತದೆ. ಯಾವುದೇ ವೈದ್ಯರನ್ನಾದರೂ ಟೆಲಿಮೆಡಿಷನ್ ಮೂಲಕವಾದರೂ ಸಂಪರ್ಕ ಮಾಡಬಹುದು. ನನ್ನ ಅನುಭವದಲ್ಲಿ ಹೇಳುವುದಾದರೆ ಮಗಳು ಡಾ.ಭವಾನಿ ಇಂಗ್ಲೆಂಡ್‌ನಲ್ಲಿದ್ದಾಗ ಆಕೆ ಗರ್ಭಿಣಿಯೆಂದು ನಾವಿಬ್ಬರು ಹೋಗಿದ್ದೆವು. ಅಲ್ಲಿ ಸ್ಕ್ಯಾನ್ ಮಾಡುವವರು ಅರೆವೈದ್ಯಕೀಯ ಸಿಬ್ಬಂದಿಗಳು. ನೇರವಾಗಿ ಸ್ತ್ರೀರೋಗತಜ್ಞರು ಸ್ಕ್ಯಾನ್ ವರದಿಯನ್ನು ನೋಡುವುದೇ ಇಲ್ಲ. ಏಳನೆಯ ತಿಂಗಳಲ್ಲಿ ಸ್ಕ್ಯಾನ್ ನೋಡುತ್ತಾರೆ. ಏನಾದರೂ ಸಮಸ್ಯೆಗಳಿದ್ದರೆ ನೋಡಬಹುದು. ನಮ್ಮಲ್ಲಿ 500ರೂಗಳನ್ನು ಹೊಂದಿದ್ದ ಮಹಿಳೆ ತಕ್ಷಣದಲ್ಲೇ ಸ್ತ್ರೀರೋಗತಜ್ಞೆಯನ್ನು ಭೇಟಿಯಾಗಿ ಅವರಿಂದ ಸಲಹೆ ಪಡೆದು ಹಿಂದಿರುಗಬಲ್ಲಳು. ಭಾರತದಲ್ಲಿರುವಷ್ಟು ಸುಲಭವಾಗಿ ವಿದೇಶದಲ್ಲಿ ವೈದ್ಯರನ್ನು ಕಾಣಲು ಸಾಧ್ಯವಿಲ್ಲ.

ಕೆನಡಾದೇಶದಲ್ಲಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಕಡ್ಡಾಯವಾಗಿ ಹದಿನಾರು ವಾರಗಳ ಕಾಲ ಕಾಯಬೇಕು. ಅದೇ ರೀತಿ ಸೊಂಟದ ಆಪರೇಷನ್ ಮಾಡಿಸಿಕೊಳ್ಳಲು ಇಪ್ಪತ್ತು ವಾರ ಕಾಯಬೇಕಾದ ಸ್ಥಿತಿಯಿದೆ. ದಂತ ಚಿಕಿತ್ಸೆಗಾಗಿ ಅಮೆರಿಕ ಮತ್ತು ಇಂಗ್ಲೆಂಡ್‌ಗಳಲ್ಲಿ ತಿಂಗಳುಗಟ್ಟಲೆ ಕಾಯಬೇಕು. ಅದಕ್ಕಾಗಿ ಅಲ್ಲಿನ ಜನ ಆರೋಗ್ಯಕ್ಕಾಗಿ ಪ್ರವಾಸ ಕೈಗೊಳ್ಳುತ್ತಿದ್ದಾರೆ. ವಿದೇಶಿಯರು ಹೆಚ್ಚು ಪ್ರವಾಸ ಕೈಗೊಳ್ಳುವ ರಾಷ್ಟ್ರಗಳ ಪಟ್ಟಿ ಹೀಗಿದೆ. ಕೆನಡಾ, ಕ್ಯೂಬಾ, ಕೋರಿಸ್ಟರಿಕಾ, ಎಕ್ವಡಾರ್, ಭಾರತ, ಇಸ್ರೇಲ್, ಜೋರ್ಡಾನ್, ಮಲೇಷಿಯಾ, ಮೆಕ್ಸಿಕೋ, ಸಿಂಗಾಪುರ್, ದಕ್ಷಿಣ ಕೊರಿಯಾ, ತೈವಾನ್, ಥೈಲ್ಯಾಂಡ್, ಟರ್ಕಿ ಕೊನೆಯದಾಗಿ ಅಮೆರಿಕ.

ಇತ್ತೀಚೆಗೆ ಜಿ.20 ರಾಷ್ಟ್ರಗಳ ಸಮಾವೇಶದಲ್ಲಿ Finance Health Task Force ರಚನೆಯಾಗಿದೆ. ಅಡ್ವಾನ್ಸ್ ಗ್ಲೋಬಲ್ ಹೆಲ್ತ್ ಪ್ರಕಾರ ಸಣ್ಣ ರಾಷ್ಟ್ರಗಳಿಗೆ ಜಿ.20ರಲ್ಲಿರುವ ದೊಡ್ಡ ರಾಷ್ಟ್ರಗಳು ಆರೋಗ್ಯವಲಯಕ್ಕೆ ಹೆಚ್ಚಿನ ಸಹಾಯ ಮಾಡಬೇಕು. ಆಗಸ್ಟ್ 2023ರಲ್ಲಿ ಭಾರತ ಸರ್ಕಾರದ ಗೃಹಇಲಾಖೆ ವೈದ್ಯಕೀಯ ಕಾರಣಗಳನ್ನು ಹೊಂದಿರುವ ವಿದೇಶಿಯರನ್ನು ಸೆಳೆಯಲು 'ಆಯುಷ್ ವೀಸಾವರ್ಗ' ತೆರೆಯುವುದಾಗಿ ಹೇಳಿದೆ. ಇದರಲ್ಲಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಕೂಡ ಸೇರಿದೆ.

ವೈದ್ಯಕೀಯ ಪ್ರವಾಸೋದ್ಯಮಕ್ಕೆ ಕಾಲ ಪರಿಪಕ್ವವಾಗಿದೆ. ಕರ್ನಾಟಕ ರಾಜ್ಯದಲ್ಲಿ ವೈದ್ಯಕೀಯ ಪ್ರವಾಸೋದ್ಯಮದ ಸುವರ್ಣಯುಗವನ್ನು ಪ್ರಾರಂಭಿಸಬಹುದು. ಯಾರು ನಿರೀಕ್ಷೆ ಮಾಡದಷ್ಟು ವಿದೇಶಿ ಬಂಡವಾಳವನ್ನು ಆಕರ್ಷಿಸಬಹುದು. ನಮ್ಮಲ್ಲಿ ವೈದ್ಯಕೀಯ ಪ್ರವಾಸೋದ್ಯಮಕ್ಕೆ ಬೇಕಾದ ಎಲ್ಲ ಮೂಲಭೂತಸೌಕರ್ಯಗಳನ್ನು ಕಾಣಬಹುದು. ಉದ್ಯೋಗ ಸೃಷ್ಟಿಗೆ ವೈದ್ಯಕೀಯ ಪ್ರವಾಸೋದ್ಯಮ ಭಾರಿ ಪ್ರಮಾಣದಲ್ಲಿ ಸಹಾಯವಾಗುತ್ತದೆ. ಇದರಿಂದ ರಾಜ್ಯದ ಎಲ್ಲ ಭಾಗಗಳಿಗೂ ಅನುಕೂಲವಾಗುತ್ತದೆ.

ಬೆಳಗಾವಿ. ಹುಬ್ಬಳ್ಳಿ ಮತ್ತು ಗುಲ್ಬರ್ಗಾದಲ್ಲೂ ಉತ್ತಮವಾದ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜುಗಳಿವೆ. ಅದರ ಸದುಪಯೋಗವನ್ನು ರಾಜ್ಯ ಸರ್ಕಾರ ಪಡೆದುಕೊಳ್ಳಬೇಕಾಗಿದೆ. ಈ ಬಗ್ಗೆ ವಿಸ್ತೃತವಾದ ಚರ್ಚೆ ನಡೆದು ಮಾರ್ಗದರ್ಶಿ ನಿಯಮಗಳು ರೂಪಿತಗೊಳ್ಳಬೇಕಾಗಿದೆ. ಈ ಯೋಜನೆಯ ಅನುಷ್ಠಾನಕ್ಕೆ ಬೇಕಾದ ಮಾಹಿತಿ ತಂತ್ರಜ್ಞಾನದ ನೆರವು ಪಡೆದುಕೊಳ್ಳಬಹುದು. ರಾಜ್ಯಸರ್ಕಾರ ತನ್ನ ಇಚ್ಛಾಶಕ್ತಿಯನ್ನು ವ್ಯಕ್ತಪಡಿಸಿದರೆ ಎಲ್ಲ ಕೆಲಸಗಳು ನಡೆಯುತ್ತವೆ.

▪ ನಿರೂಪಣೆ: ಶ್ರೀವತ್ಸ

## ಕತ್ತಲಾಗಿದ್ದ ಬದುಕಿಗೆ ಬೆಳಕಾದ ಶ್ರೀದೇವಿ ಆಸ್ಪತ್ರೆ

◀◀ ...ಮೊದಲನೇ ಪುಟದಿಂದ

ಇನ್ನೊಂದು ಮೂಗಿನಿಂದ ಮಾಡುವುದು. ಇಲ್ಲಿ ಚಂದ್ರಶೇಖರ್ ಅವರಿಗೆ ಮೂಗಿನಿಂದ ಆಪರೇಷನ್ ಮಾಡಲಾಗಿದೆ. ಮೂಗಿನ ಹೊಳ್ಳೆಗಳಿಂದ ಎಂಡೋಸ್ಕೋಪಿ ಸರ್ಜರಿ ಮಾಡಿ ಟ್ಯೂಮರ್‌ಗಳನ್ನು ನಾಶಪಡಿಸಲಾಗಿದೆ. ಹೀಗಾಗಿ ಚಂದ್ರಶೇಖರ್‌ಗೆ ಯಾವುದೇ ಅಂಗವನ್ನು ಕತ್ತರಿಸದೇ, ಯಾವುದೇ ಗಾಯದ ಕಲೆ ಮಾಡದೇ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಿ ಮುಗಿಸಲಾಗಿದೆ. ಬದುಕೇ ಕತ್ತಲು ಎಂದುಕೊಂಡಿದ್ದ ಚಂದ್ರಶೇಖರ್ ಬಾಳೀಗ ಶ್ರೀದೇವಿ ಆಸ್ಪತ್ರೆ ವೈದ್ಯರಿಂದ ಬೆಳಕಾಗಿದೆ.

ಶ್ರೀದೇವಿ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯು ಹಲವು ದಶಕಗಳಿಂದ ಬಡವರಿಗೆ ಉತ್ತಮ ಗುಣಮಟ್ಟದ ವೈದ್ಯಕೀಯ ಸೇವೆ ನೀಡುತ್ತಾ ಬಂದಿದೆ. ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳನ್ನು ಹೊಂದಿದ್ದು, ನುರಿತ ತಜ್ಞ ವೈದ್ಯರನ್ನು ಹೊಂದಿದೆ. ಅಷ್ಟೇ ಅಲ್ಲ, ಆಸ್ಪತ್ರೆಗೆ ಬರುವ ರೋಗಿಗಳ ಜೊತೆ ವೈದ್ಯಕೀಯ ಸಿಬ್ಬಂದಿ ಉತ್ತಮ ಸಮಾಲೋಚನೆ ನಡೆಸುವ ಚಾಕಚಕ್ಯತೆ ಜೊತೆಗೆ ಮಾನವೀಯ ಗುಣಗಳನ್ನೂ ಮೈಗೂಡಿಸಿಕೊಂಡಿದ್ದು, ಇಡೀ ಕರ್ನಾಟಕದಲ್ಲಿ ವೈದ್ಯಕೀಯ ಸೇವೆಗೆ ಶ್ರೀದೇವಿ ಆಸ್ಪತ್ರೆನೇ ಉತ್ತಮ ಎನ್ನುವ ಹೆಗ್ಗಳಿಕೆಯನ್ನು ಮುಂದುವರಿಸಿಕೊಂಡು ಹೋಗುತ್ತಿದೆ.

▪ ನಿರೂಪಣೆ: ಬಿ.ಎಂ.ಸುನೀತಾ

"ನನಗೆ ಕಣ್ಣುಗಳು ಕಾಣಿಸುತ್ತಿರಲಿಲ್ಲ. ಆಗ ಮಧುಗಿರಿಯಲ್ಲಿ ಸ್ಕ್ಯಾನ್ ಮಾಡಿಸಿದ್ದೆ. ಅಲ್ಲಿನ ವೈದ್ಯರು ಬ್ರೇನ್ ಟ್ಯೂಮರ್ ಇದೆ ಎಂದು ಹೇಳಿದ್ದರು. ಆಪರೇಷನ್‌ಗಾಗಿ ಐದಾರು ಲಕ್ಷ ರೂಪಾಯಿ ಆಗುತ್ತದೆ ಎಂದು ತಿಳಿಸಿದ್ದರು. ಸ್ನೇಹಿತರ ಸಲಹೆಯಂತೆ, ನನ್ನ ಅಣ್ಣನ ಜೊತೆ ಶ್ರೀದೇವಿ ಆಸ್ಪತ್ರೆಗೆ ಬಂದು ವೈದ್ಯರನ್ನು ಭೇಟಿ ಮಾಡಿದಾಗ ಪಿಟ್ಯೂಟರಿ ಟ್ಯೂಮರ್ ಇರುವುದು ತಿಳಿಯಿತು. ಕೂಡಲೇ ಶ್ರೀದೇವಿ ಆಸ್ಪತ್ರೆ ವೈದ್ಯರು ಅತಿಕಡಿಮೆ ಖರ್ಚಿನಲ್ಲಿ ಆಪರೇಷನ್ ಮಾಡಿ ನನಗೆ ಕಣ್ಣು ಕಾಣಿಸುವಂತೆ ಮಾಡಿದ್ದಾರೆ".

▪ ಚಂದ್ರಶೇಖರ್, ಗುಣಮುಖರಾದವರು.

"ನಮ್ಮಂತಹ ಬಡವರಿಗೆ ಶ್ರೀದೇವಿ ಆಸ್ಪತ್ರೆಯೇ ಉತ್ತಮ. ಯಾಕೆಂದರೆ, ನನ್ನ ತಮ್ಮನ ಕಣ್ಣು ಕಾಣುವಂತೆ ಮಾಡಿದ್ದಾರೆ. ಬೇರೆ ಕಡೆ ಹೋಗಿದ್ರೆ ಐದಾರು ಲಕ್ಷ ರೂಪಾಯಿ ಖರ್ಚು ಆಗುತ್ತಿತ್ತು. ಇಲ್ಲಿ ಶೇ.80ರಷ್ಟು ಖರ್ಚು ಕಡಿಮೆ ಆಗಿದೆ. ಎಲ್ಲಾ ವೈದ್ಯರು ಬಹಳ ಕಾಳಜಿಯಿಂದ ನೋಡಿಕೊಂಡಿದ್ದಾರೆ".

▪ ಉಮೇಶ್, ಚಂದ್ರಶೇಖರ್ ಸಹೋದರ.

ಅರ್ಚನೆ



**ಶಾಂತಾದುರ್ಗಾದೇವಿ ಹುಲಿನಾಯ್ಕರ್**
ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ದುರ್ಗಾಂಬಿಕಾದೇವಿ ದೇವಸ್ಥಾನ

# ವರ್ಷಕ್ಕೊಮ್ಮೆ ಬರುವ ಗೌರಿ ಗಣೇಶ ತರುವ ಹರ್ಷ ಅಗಣಿತ

ಹಬ್ಬದ ಆಚರಣೆಯ ಹಿಂದೆ ಕೌಟುಂಬಿಕ ಭಾಂಧವ್ಯ, ಸಮಾಜದ ಭದ್ರತೆ ಮತ್ತು ಐಕ್ಯತೆಗೆ ಸಹಾಯಕವಾಗುವ ವಿಚಾರಗಳಿವೆ. ಧ್ಯಾನ, ತಪಸ್ಸುಗಳ ಮೂಲಕ ಅಧ್ಯಾತ್ಮ ಸಾಧನೆ ಮಾಡಬೇಕು ಎನ್ನುವವರಿಗೂ ಹಬ್ಬಗಳು ಪ್ರೇರಣೆ ನೀಡಬಹುದು. ಅಸುರೀಶಕ್ತಿಗಳನ್ನು ವಿಸರ್ಜಿಸಿ ದೈವೀಶಕ್ತಿಗಳು ಅವಾಹಿಸುವಂತೆ ಹಬ್ಬದ ಆಚರಣೆ ಸೂಚ್ಯವಾಗಿ ಹೇಳುತ್ತದೆ.

### ಗೌರಿ ಗಣೇಶ ಪ್ರಕೃತಿಗೆ ಹತ್ತಿರದವರು

ಪ್ರಕೃತಿಗೆ ಹತ್ತಿರವಿರುವ ಹಬ್ಬಗಳಲ್ಲಿ ಗೌರಿ–ಗಣೇಶ ತುಂಬ ಪ್ರಮುಖವಾದದ್ದು. ಭಾದ್ರಪದ ಮಾಸದ ಮೂರನೆಯ ದಿನದಂದು ಸಾಮಾನ್ಯ ಗೃಹಿಣಿಯರಂತೆ ಗೌರಿ  ತನ್ನ ತವರು ಮನೆ ಭೂಲೋಕಕ್ಕೆ ಬರುತ್ತಾಳೆ. ಆಕೆಯನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಲು ಶಿವ ಪಾರ್ವತಿಯರ ಪ್ರೇಮದ ಪುತ್ರ ಗಣೇಶ ಸಹ ಬರುತ್ತಾನೆ. ಅವರಿಬ್ಬರನ್ನು ಸತ್ಕರಿಸಿ ಕಳುಹಿಸುವ ಹಬ್ಬವೇ ಗೌರಿ, ಗಣೇಶ ಹಬ್ಬ.

### ಗೌರಿಪೂಜೆಗೆ ಪೌರಾಣಿಕ ಹಿನ್ನೆಲೆ

ಉತ್ತರಾಂಚಲದಲ್ಲಿರುವ ಗೌರಿಕುಂಡಕ್ಕೆ ವಿಶೇಷವಾದ ಸ್ಥಾನವಿದೆ. ಗೌರಿಕುಂಡದಲ್ಲಿ ಬಿಸಿನೀರಿನ ಬುಗ್ಗೆಯಿದೆ. ಇಲ್ಲೇ ಪಾರ್ವತಿ ಸ್ನಾನ ಮಾಡಿದಳು ಎಂದು ಭಕ್ತರು ಹೇಳುತ್ತಾರೆ. ಸ್ವರ್ಣಗೌರಿಯನ್ನು ಭಾದ್ರಪದ ಮಾಸದ ಶುಕ್ಲಪಕ್ಷ ತೃತೀಯ ತಿಥಿಯಂದು ಷೋಡಶೋಪಾಚಾರದಿಂದ ಪೂಜಿಸಬೇಕು. ಸ್ವರ್ಣಗೌರಿ ಎಂದರೆ ಬಂಗಾರದ ಬಣ್ಣದಂತೆ ಹೊಳೆಯುವ ಗೌರಿ ಎಂದಾರ್ಥ. ಹೆಣ್ಣು ಮಕ್ಕಳು ಮತ್ತು ಮುತ್ತೈದೆಯರು ಈ ಹಬ್ಬವನ್ನು ಪ್ರಾಚೀನ ಕಾಲದಿಂದಲೂ ನಡೆಸಿಕೊಂಡು ಬಂದಿದ್ದಾರೆ.

ಇದಕ್ಕೆ ಸಂಬಂಧವಾಗಿ ಪುರಾಣದ ಕತೆಯೊಂದಿದೆ. ಅದರ ಪ್ರಕಾರ– ಚಂದ್ರಪ್ರಭ ಎಂಬ ರಾಜನು ಬೇಟೆಗೆ ಹೋಗುತ್ತಾನೆ. ಅಲ್ಲಿ ನೈಸರ್ಗಿಕವಾಗಿ ಸುಂದರವಾದ ಕೊಳವೊಂದು ಕಾಣಿಸುತ್ತದೆ. ಅಲ್ಲಿ ಅಪ್ಸರೆಯರು 'ಸ್ವರ್ಣಗೌರಿ ವ್ರತ' ಮಾಡುತ್ತಿರುತ್ತಾರೆ. ರಾಜನ ಪ್ರಾರ್ಥನೆಯಂತೆ ಅಪ್ಸರೆಯರು ರಾಜನಿಗೆ ಸ್ವರ್ಣಗೌರಿ ವ್ರತದ ಮಹಿಮೆ ಹೇಳುತ್ತಾರೆ. ರಾಜನಿಗೆ ಅಪ್ಸರೆಯರು 16 ಗಂಟು ಹಾಕಿದ ದಾರವನ್ನು ಕೊಡುತ್ತಾರೆ. ರಾಜ ಅರಮನೆಗೆ ಹಿಂದಿರುಗಿ ಆ ದಾರವನ್ನು ತನ್ನ ಇಬ್ಬರು ರಾಣಿಯರಿಗೆ ಕೊಡುತ್ತಾನೆ. ಹಿರಿಯ ರಾಣಿ ತಿರಸ್ಕಾರದಿಂದ ಆ ದಾರವನ್ನು ಗಿಡದ ಮೇಲೆ ಎಸೆಯುತ್ತಾಳೆ. ಗಿಡ ಸಹ ಚೆನ್ನಾಗಿ ಚಿಗುರುತ್ತದೆ.ಇದನ್ನು ತಿಳಿದ ಕಿರಿಯ ರಾಣಿ ದಾರವನ್ನು ಸ್ವೀಕರಿಸಿ ಪುತ್ರ ಸಂತಾನ ಮೊದಲಾದ ಭಾಗ್ಯಗಳನ್ನು ಪಡೆಯುತ್ತಾಳೆ. ಸ್ವರ್ಣಗೌರಿ ವ್ರತ ಗೃಹಿಣಿಯರಿಗೆ ಸಂತಾನ ಭಾಗ್ಯ ಮತ್ತು ಸಂಸಾರದಲ್ಲಿ ನೆಮ್ಮದಿ ನೀಡುವ ವ್ರತವೆಂದು ಈ ಕತೆ ಸೂಚ್ಯವಾಗಿ ಹೇಳುತ್ತದೆ.

### ಪಾರ್ವತಿಯೇ ಗಿರಿಜೆ

ಸ್ವರ್ಣಗೌರಿ ಎಂದರೆ ಶಿವನ ಅರ್ಧಾಂಗಿ. ಆಕೆ ಜಗದ್ವಂದ್ಯಳು. ಆಕೆಯ ತಂದೆ ದಕ್ಷ ಯಜ್ಞ ಮಾಡಿ ತನ್ನ ಅಳಿಯನ್ನು ಕರೆದಿರುವುದಿಲ್ಲ. ಶಿವ ಬೇಡವೆಂದರೂ ಅಲ್ಲಿಗೆ ಹೋದ ಪಾರ್ವತಿ ಶಿವ ನಿಂದನೆ ಕೇಳಲಾಗದೇ ಯಜ್ಞಕುಂಡಕ್ಕೆ  ಹಾರಿ ಆತ್ಮಾಹುತಿ ಮಾಡಿಕೊಳ್ಳುತ್ತಾಳೆ. ಮುಂದಿನ ಜನ್ಮದಲ್ಲಿ ಆಕೆ ಶಿವಭಕ್ತ ಹಿಮವಂತ ಹಾಗೂ ಮೇನಾದೇವಿಯ ಮಗಳು ಗಿರಿಜೆಯಾಗಿ ಜನಿಸಿ, ಕಾಳಿಕಾ ವ್ರತ ಮಾಡುತ್ತಾ 'ಅಪರ್ಣಾ' ಎಂದು ಕರೆಸಿಕೊಂಡು, ಶಿವನನ್ನು ಒಲಿಸಿಕೊಂಡು ಮತ್ತೆ ಆತನನ್ನು ಮದುವೆಯಾಗುತ್ತಾಳೆ. ಅವರಿಗೆ ಷಣ್ಮುಖ ಎಂಬ ಮಗ ಜನಿಸುತ್ತಾನೆ. ಆತನೆ ತಾರಕಾಸುರನ್ನು ಕೊಂದವನು.

### ಪೂಜೆಗೆ ಸಿದ್ಧತೆ ಹೇಗಿರಬೇಕು?

ಸ್ವರ್ಣಗೌರಿಯನ್ನಿಡುವ ಪದ್ದತಿ ಅನೇಕರ ಮನೆಯಲ್ಲಿದೆ. ಅವರವರ ಸಂಪ್ರದಾಯದಂತೆ ಪೂಜೆ ಮಾಡಬಹುದು. ಕಲಶದಲ್ಲಿ ಗಂಗೆಯನ್ನು ಹಾಕಿ ಐದು ವಿಳ್ಳೆದೆಲೆನ್ನಿಟ್ಟು ಹಣ್ಣುಗಳನ್ನಿಡಬೇಕು. ಕಲಶದ ಸುತ್ತ ಗಂಧ ಹಚ್ಚಿ ನಾಲ್ಕು ಕಡೆ ಅರಿಶಿನ ಕುಂಕುಮಗಳನ್ನು ಹಚ್ಚಬೇಕು. ಒಂದು ತಟ್ಟೆಯಲ್ಲಿ ಅರಿಶಿನ ಹಚ್ಚಿದ ವಸ್ತ್ರಹಾಕಿ ಎರಡು ವಿಳ್ಳೆದೆಲೆ, ಎರಡು ಬಟ್ಟಲಡಿಕೆಯಿಟ್ಟು ಗೌರಿಮೂರ್ತಿಯನ್ನು ಅದರ ಮೇಲೆಯಿಡಬೇಕು. ಜೊತೆಯಲ್ಲಿ ಸಿದ್ಧಪಡಿಸಿದ ಕಳಸವನ್ನು ಸ್ಥಾಪನೆ ಮಾಡಬೇಕು. ಪೂಜೆಗೆ ಪತ್ರೆ, ಹೂವು,  ಐದು ತೆಂಗಿನಕಾಯಿ, ಅರಿಶಿನ, ಕುಂಕುಮ, ಚಂದನ, ಅಡಿಕೆ, ದಶಾಂಗ, ಐದು ಬಗೆ ಹಣ್ಣು, ದೀಪಕ್ಕೆ ತುಪ್ಪದಲ್ಲಿ ನನೆಸಿದ ಬತ್ತಿ, ಹದಿನಾರುಎಳೆ ಗೆಜ್ಜೆವಸ್ತ್ರ, ಹದಿನಾರುಎಳೆ ದೋರ ಸಿದ್ಧಪಡಿಸಿಕೊಳ್ಳಬೇಕು. ಹದಿನಾರು ಗಂಟು ಹಾಕಿ ದೋರ ಸಿದ್ಧಪಡಿಸಿಕೊಂಡಿರಬೇಕು.

ಪಂಚಾಮೃತ ಅಭಿಷೇಕ, ಮಧುಪರ್ಕ, ಮಂಗಳಾರತಿ, ಉಪಾಯನ ದಾನಕ್ಕೆ ಎರಡು ತೆಂಗಿನಕಾಯಿ, ನಾಲ್ಕು ವಿಳ್ಳೆದೆಲೆ, ಅಡಿಕೆ, ದಕ್ಷಿಣೆ ಮತ್ತು ಸ್ವಲ್ಪ ಅಕ್ಕಿ ಅವುಗಳನ್ನು ಮುಚ್ಚಲು ಬಾಳೆಯಲೆ ಜೋಡಿಸಿ ಇಟ್ಟುಕೊಳ್ಳಬೇಕು.

ಸ್ವರ್ಣಗೌರಿ ವ್ರತದಲ್ಲಿ ಬಾಗಿನ ಕೊಡುವ ಪದ್ದತಿಯಿದೆ. ಬಾಗಿನದಲ್ಲಿ  ವಿವಿಧ ಧಾನ್ಯಗಳು, ತೆಂಗಿನಕಾಯಿ, ಬಳೆಬಿಚ್ಚೋಲೆ, ಕನ್ನಡಿ, ಐದು ವಿಧದ ಬಳೆ, ಐದು ಬಗೆಯ ಹಣ್ಣು, ರವಿಕೆಯ ಕಣ, ಕಾಯಿ. ಅತ್ತಿಗೆ ಮತ್ತು ನಾದಿನಿಯರಿಗೆ ಕೊಡಲು ಸೀರೆ, ಸುಮಂಗಲಿಯರಿಗೆ ಅವರು ಉಪಯೋಗಿಸುವ ವಸ್ತುಗಳು ಮತ್ತು ಭಕ್ಷ್ಯ ಹಾಕಬೇಕು.

### ದೇವಿಯ ಕೃಪೆಗಿಂತ ದೊಡ್ಡದು ಯಾವುದಿದೆ ?

ನನಗೆ ಸುದೀರ್ಘಕಾಲ ದೇವಿಯ ಆರಾಧನೆಯಿಂದ ದೊರಕಿದ ಸತ್ಫಲಗಳನ್ನು ತಿಳಿಸುವಂತೆ  ಮಗಳು ಸಮಾನವಾಗಿರುವ ಶ್ರೀಮತಿ ಭಾರತಿ ಅವರು ಕೇಳುತ್ತಾರೆ. ವೈಯಕ್ತಿಕ ವಿಚಾರಗಳನ್ನು ಹೇಳಲು ಸಂಕೋಚವಾಗುವುದುಂಟು. 'ಅಮ್ಮಾ ನಿಮ್ಮ ಮಾತುಗಳು ಮುಂದಿನ ಪೀಳಿಗೆಗೆ ದಾರಿ ದೀಪವಾಗುತ್ತದೆ' ಎಂದು ಭಾರತಿ ನನ್ನ ಬಾಯಿ ಕಟ್ಟಿಹಾಕುತ್ತಾರೆ.

ನಾನು ದೆಹಲಿಯಲ್ಲಿದ್ದಾಗ ನಮ್ಮ ತಂದೆಯ ಮನೆಯಲ್ಲಿ ಗೌರಿವ್ರತ ಮಾಡುತ್ತಿರಲಿಲ್ಲ. ಪಾರ್ವತಿ ಮತ್ತು ಶಿವನ ಪೂಜೆ ಮಾಡುತ್ತಿದ್ದೆವು. 1977ರಲ್ಲಿ ಡಾ.ಹುಲಿನಾಯ್ಕರ್ ಅವರನ್ನು ಮದುವೆಯಾಗಿ ನವಲಗುಂದಕ್ಕೆ ಬಂದ ಮೇಲೆ ಅಲ್ಲಿದ್ದ ಅವಧೂತರಾದ ಪೂಜ್ಯ ಹುರಕಡ್ಲಿ ಅಜ್ಜ ಅವರು ನಮಗೆ ಹದಿಮೂರು ವರ್ಷ ತಪ್ಪದೇ ಮಾಡುವ ಮಂಗಳಗೌರಿ ವ್ರತದ ದೀಕ್ಷೆ ಕೊಟ್ಟರು. ಅಲ್ಲಿಂದ ನಮ್ಮ ಕುಟುಂಬಕ್ಕೆ ದೇವಿಯ ಆರಾಧನೆಯ ಕೈಂಕರ್ಯ ದೊರೆಯಿತು. ನಮ್ಮ ನಾಲ್ವರು ಮಕ್ಕಳು ಅಂದರೆ ಮೂವರು ಹೆಣ್ಣು ಮತ್ತು ಓರ್ವ ಗಂಡು ಮಗ ಸಹ ದೇವಿ ಆರಾಧಕರಾದರು.  ನಂತರ ಬಂದ ನಮ್ಮ ಸೊಸೆ ಸಹ ದೇವಿಯ ಆರಾಧನೆಯ ಪರಂಪರೆ ಮುಂದುವರಿಸಿದ್ದಾರೆ. ಪ್ರತಿ ದಿನ ಎಲ್ಲರೂ ಬಗುಳಾದೇವಿಯ ಅಷ್ಟೋತ್ತರ ಮತ್ತು ಶತಕಗಳನ್ನು ಹೇಳಿಯೇ ಮುಂದಿನ ಕೆಲಸ ಮಾಡುವುದು. ಕನಕಗಿರಿಯಲ್ಲಿ ಜೀವಂತ ಸಮಾಧಿಸ್ಥರಾದ ಪೂಜ್ಯ ಚಿದಾನಂದ ಅವಧೂತರು ಬಗುಳಾದೇವಿಯ ಶತಕ ರಚಿಸಿದ್ದಾರೆ. ಅವರ ಮತ್ತೊಂದು ಗ್ರಂಥ 'ಜ್ಞಾನಸಿಂಧು' ಅಧ್ಯಾತ್ಮಜೀವಿಗಳ ಕೈಪಿಡಿ ಎಂದು ಪ್ರಸಿದ್ಧಿಯಾಗಿದೆ.

ಈ ಸಂದರ್ಭದಲ್ಲಿ ಗೌರಿ ಅರ್ಥಾತ್ ದೇವಿಯ ಆರಾಧನೆಯಿಂದ ಆಗಿರುವ ಅನುಕೂಲಗಳನ್ನು ಪಟ್ಟಿ ಮಾಡಿದಂತೆ ಹೇಳುವುದು ಕಷ್ಟ. ಒಂದೇ ಮಾತಿನಲ್ಲಿ ಹೇಳುವುದಾದರೆ ನಾವು ದೇವಿಯನ್ನು ನಂಬಿದ ಕಾರಣಕ್ಕಾಗಿ ಎಂತಹುದೇ ಕಷ್ಟಕರ ಸನ್ನಿವೇಶದಲ್ಲೂ ನಮ್ಮಲ್ಲಿ ಆತ್ಮವಿಶ್ವಾಸ ಮಾಯವಾಗಿಲ್ಲ. ದೇವಿ ನಮ್ಮನ್ನು ಕಾಪಾಡುತ್ತಾಳೆ ಎಂಬ ಪ್ರಬಲ ನಂಬಿಕೆಯೇ ಇಂದಿಗೂ ನಮ್ಮ ಮುನ್ನಡಸುವ ಮಾರ್ಗವಾಗಿದೆ.

ನಾನು ಹದಿಮೂರು ವರ್ಷದ ಮಂಗಳಗೌರಿ ವ್ರತ ಮಾಡಿದ ಮೇಲೆ ಮುತ್ತೈದೆಯರಿಗೆ ಬಾಗಿನ ಕೊಟ್ಟು ವ್ರತ ಸಮಾಪ್ತಿ ಮಾಡಲು ನಿರ್ಧಾರ ಮಾಡಿಕೊಂಡೆ. ಆ ರಾತ್ರಿ ನನಗೆ ಕನಸಿನಲ್ಲಿ ಮುತ್ತೈದೆಯೊಬ್ಬರು ಕಾಣಿಸಿಕೊಂಡು 'ನಾನು ಬೇಡ ಬೇಡ' ಎಂದರೂ ಕೇಳದೆ ನನಗೆ ಬಾಗಿನ ಕೊಟ್ಟರು. ಗಾಬರಿಯಿಂದ  ಎಚ್ಚರಗೊಂಡೆ. ನಾನು ದೇವಿ ಸ್ವರೂಪಿಣಿಯರಾದ ಮುತ್ತೈದೆಯರಿಗೆ ಬಾಗಿನ ಕೊಡಲು ಸಂಕಲ್ಪ ಮಾಡಿದರೆ ನನಗೆ ಬಾಗಿನ ಕೊಡುವ ಈ ಕನಸಿನ ಸಂಕೇತವೇನು? ಎಂಬುದು ನನ್ನ ಕಳವಳದ ವಿಚಾರವಾಗಿತ್ತು. ನನ್ನ ಸಂಕಲ್ಪದಲ್ಲಿ ದೋಷವಿದೆಯೇ ಎಂಬ ಅನುಮಾನ ಕಾಡತೊಡಗಿತ್ತು. ಅಷ್ಟು ವರ್ಷ ಮಾಡಿದ ವ್ರತ ನಿಯಮಗಳನ್ನು ದೇವಿ ಒಪ್ಪಿರಲಿಲ್ಲವೇ? ನಾನು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಮಂಗಳಗೌರಿ ವ್ರತ ಮಾಡಬೇಕು ಎಂಬುದು ಹುರಕಡ್ಲಿ ಅಜ್ಜ ಅವರ ಆದೇಶವಾಗಿತ್ತು. ಅದರಂತೆ ಪ್ರತಿಮಂಗಳವಾರ ಮತ್ತು ಶ್ರಾವಣದ ಶುಕ್ರವಾರಗಳಂದು ವ್ರತ ಮಾಡುವುದಷ್ಟೇ ನನ್ನ ಕೆಲಸವೆಂಬ ಭಾವನೆಯಿಂದ ಅದರಲ್ಲಿ ತೊಡಗಿಸಿಕೊಂಡಿದ್ದೆ. ಅಂತಹುದರಲ್ಲಿ ಕನಸು ನನಗೆ 'ಶಾಕ್' ನೀಡಿತ್ತು. ತಕ್ಷಣ ಹುರಕಡ್ಲಿ ಅಜ್ಜ ಅವರ ಬಳಿ ಈ ವಿಷಯ ಪ್ರಸ್ತಾಪಿಸಿದೆ. "ತಾಯಿ ನೀನು ಗಾಬರಿಯಾಗುವಂತಹುದು ಏನೂ ಆಗಿಲ್ಲ. ದೇವಿಗೆ ನಿನ್ನ ವ್ರತ ಇಷ್ಟವಾಗಿದೆ ಎನಿಸುತ್ತಿದೆ. ಅದಕ್ಕೆ ಆಕೆ ನಿನ್ನನ್ನು ಹರಸಿದ್ದಾಳೆ. ಈ ವ್ರತದ ನಿಯಮವನ್ನು ನಿನ್ನ ಬದುಕಿನ ಕೊನೆಯ ತನಕ ಮುಂದುವರಿಸು" ಎಂದರು. ಅವರ ಮಾತು



ಕೇಳಿ ಸಮಾಧಾನವಾಯಿತು.

### ವ್ರತದ ನಿಯಮಗಳು ನಿತ್ಯ ಬದುಕಿಗೂ ಸಹಾಯಕ

ವ್ರತ ಮಾಡುವುದರಿಂದ ನಮ್ಮಲ್ಲಿ ಆತ್ಮವಿಶ್ವಾಸ ವೃದ್ಧಿಯಾಗುತ್ತದೆ. ವ್ರತಾಚರಣೆ ಸಮರ್ಥವಾಗಿ ಮಾಡಿದರೆ ಸಂಕಲ್ಪಶಕ್ತಿ ಹೆಚ್ಚಾಗುತ್ತದೆ. ವ್ರತ ತಪಸ್ಸಿದ್ದಂತೆ. ಇದನ್ನು ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡರೆ ಯಾವುದೇ ಕೆಲಸಗಳು ಕಷ್ಟವೆನಿಸುವುದಿಲ್ಲ. ಎಲ್ಲ ಸಮಸ್ಯೆಗಳಿಗೂ ನಮಗೆ ಪರಿಹಾರ ಹೊಳೆಯುತ್ತದೆ. ವ್ರತ ಮಾಡುವುದು ಕೇವಲ ಆಚರಣೆ, ಸಂಪ್ರದಾದಯ ಮಾತ್ರವಲ್ಲ ಮುಂದಿನ ಬದುಕಿಗೆ ಬೇಕಾಗುವ ಚೈತನ್ಯನ್ನು ಪಡೆದುಕೊಳ್ಳುವ ಮೂಲಕೇಂದ್ರ.

### ಶ್ರೀ ವಿನಾಯಕ ಚೌತಿ

ಈ ವರ್ಷ ಶ್ರಾವಣ– ಬಾದ್ರಪದ ಮಾಸದ 17ರಂದು ತದಿಗೆಯ ಜೊತೆ ಚತುರ್ಥಿ ಸಹ ಬಂದಿದೆ. ಹಾಗಾಗಿ ಗೌರಿ ಗಣೇಶ ಒಂದೇ ದಿನ ಬಂದಿದೆ. ಹೇರಂಬ, ಏಕದಂತ, ಗಣಪತಿ,ವಿನಾಯಕ ಮೊದಲಾದ ಹೆಸರುಗಳಿಂದ ಗಣಪತಿಯನ್ನು ಕರೆಯುತ್ತಾರೆ. ಭಾರತೀಯ ಸಂಸ್ಕೃತಿಯಲ್ಲಿ ಗಣೇಶ ದೇವರಷ್ಟು ಪ್ರಸಿದ್ಧವಾದ ಮತ್ತೊಂದು ದೇವರಿಲ್ಲ. ವಿದ್ಯೆಗೆ ಅಧಿಪತಿ ಗಣೇಶ ಎಂದು ನಮ್ಮವರು ನಂಬುತ್ತಾರೆ. ವಿಘ್ನದಾಯಕನಾದ ಗಣಪತಿಗೆ ಮೊದಲ ಪೂಜೆ ಸಂದಾಯವಾಗುತ್ತದೆ. ಗಣಪತಿಗಿರುವಷ್ಟು ದೇವಾಲಯಗಳು ಬೇರೆ ಯಾವ ದೇವರಿಗೂ ಇಲ್ಲ.

### ಗಣೇಶನಿಗೆ 21 ಗರಿಕೆಯಿಂದಲೇ ಪೂಜೆ ಏಕೆ?

ಗಣಪತಿ ಕತೆಯಲ್ಲಿ ಕಲ್ಪನೆಗೆ ಹೆಚ್ಚಿನ ಮಹತ್ವ ಕೊಡಲಾಗಿದೆ. ಆ ಕತೆಯಲ್ಲೂ ಸಂಕೇತಗಳಿರುವುದನ್ನು ವಿದ್ವಾಂಸರಾದ ಬನ್ನಂಜೆ ಗೋವಿಂದಾಚಾರ್ಯ ಅವರು ಗುರುತಿಸಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಗಣಪತಿಗೆ 21 ಗರಿಕೆ ಮತ್ತು 21 ಮೋದಕಗಳಿಂದ ಪೂಜೆ ಮಾಡಲಾಗುತ್ತದೆ. ಇದಕ್ಕೆ ಯಾವ ಸಂದೇಶವಿದೆ ಎಂಬುದನ್ನು ಶ್ರೀ ಗೋವಿಂದಾಚಾರ್ಯ ಅವರು ವಿವರಿಸುತ್ತಾರೆ. ತತ್ವಾಭಿಮಾನಿ ದೇವತೆಗಳಲ್ಲಿ ಗಣಪತಿ 21 ಮೆಟ್ಟಲಲ್ಲಿನಲ್ಲಿದ್ದಾನೆ. ಅದಕ್ಕಾಗಿ ಅವನಿಗೆ 21 ಗರಿಕೆಯಿಂದ ಪೂಜೆ ಮಾಡಲಾಗುತ್ತದೆ. ಅದರಂತೆ 21 ಮೋದಕಗಳನ್ನು ಅರ್ಪಿಸಲಾಗುತ್ತದೆ.

ಗಣಪತಿ ಆಕಾಶದೇವತೆ. ಅವನು ಎಲ್ಲ ಕಾರ್ಯಗಳಿಗೂ ಅವಕಾಶ ಕಲ್ಪಿಸಿಕೊಡುವ ಶಕ್ತಿ ದೇವತೆಯಾಗಿದ್ದಾನೆ. ಅದಕ್ಕಾಗಿ ಅವನಿಗೆ ಮೊದಲ ಪೂಜೆ ನಡೆಯುತ್ತದೆ. ಅವನಿಗೆ ಗಜಮುಖವಿರುವುದಕ್ಕೆ ಮತ್ತೊಂದು ಕತೆಯಿದೆ. ಗಜಾಸುರ ಎಂಬ ರಾಕ್ಷಸ ತನ್ನ ಸ್ವರೂಪವಿಲ್ಲದವರು ತನ್ನನ್ನು ಕೊಲ್ಲಬಾರದು ಎಂಬ ವರವನ್ನು ಬ್ರಹ್ಮನಿಂದ ಪಡೆದನಂತೆ. ಅವನನ್ನು ಸಂಹರಿಸಲು ಗಣಪತಿ ಗಜಮುಖನಾದ ಎನ್ನುವ ಕತೆಯಿದೆ.

ಭಾರತೀಯ ಸಂಸ್ಕೃತಿಯಲ್ಲಿ ಪ್ರಾಣಿಗಳು ಮನುಷ್ಯರೂಪ ತಾಳಿ ದೇವರಾಗುವುದುಂಟು. ವರಾಹ, ನರಸಿಂಹ ಹಾಗೂ ಹಯಗ್ರೀವ ಮೊದಲಾದ ರೂಪಗಳನ್ನು ಪೂಜೆ ಮಾಡಲಾಗುತ್ತದೆ. ಇದಕ್ಕೆ ಅಧ್ಯಾತ್ಮದ ಅರ್ಥವಿದೆ. ಗಣಪತಿಯ ರೂಪಕ್ಕೂ ಇಂತಹುದೇ ಅರ್ಥವನ್ನು ಕೊಡಲಾಗಿದೆ. ಗಣಪತಿ ಕುಂಡಲೀನಿ ಯೋಗಸಾಧಕರಿಗೆ ಅತ್ಯಗತ್ಯವಾದ ಆಶೀರ್ವಾದವನ್ನು  ಗಣಪತಿ ನೀಡುತ್ತಾನೆ. ಅವರ ಹೊಟ್ಟೆಯ ಮೇಲಿರುವ ಹಾವು ಕುಂಡಲೀನಿ ಯೋಗದ ಸಂಕೇತವೆಂದು ವಿದ್ವಾಂಸರು ಹೇಳುತ್ತಾರೆ. ಗಣಪತಿ ಎಚ್ಚರಪ್ರಜ್ಞೆಯ ಸಂಕೇತ. ಅವನು ವಿದ್ಯೆಯ ಅಧಿಪತಿ. ಎಚ್ಚರಪ್ರಜ್ಞೆಯಿರುವವನು  ಜ್ಞಾನಿ ಎಂದೇ ಭಾವಿಸಬೇಕು.

ಗಣಪತಿಯನ್ನು ಬಹುಸಂಖ್ಯಾತರು ಪೂಜಿಸುವ ಕಾರಣ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಅವನನ್ನು ಬಳಸಿಕೊಳ್ಳಲಾಗಿದೆ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಣಪತಿ ಅನೇಕ ಜಾತಿ,ಮತ ಹಾಗೂ ಪಂಥದವರನ್ನು ಒಂದುಗೂಡಿಸಿದ್ದನು. ಈಗಲೂ ಎಲ್ಲಾ ಜಾತಿ, ಜನಾಂಗದವರಿಗೆ ಗಣಪತಿ ಅತ್ಯಂತ ಪ್ರೀತಿ ಮತ್ತು ಭಕ್ತಿಯ ದೇವರಾಗಿದ್ದಾನೆ.

■ ನಿರೂಪಣೆ: ಎನ್.ಭಾರತಿ

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor in Chief: **Dr M R Hulinaykar**